ಬೆಲೆ ರೂ.2.50 WPP No. SK/WPP/UDP/81/2012-2014
D.O.P - 15-12-2013 at Udupi Sorting Office

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2014

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-14 ಸಂಚಿಕೆ-8 ಪುಟಗಳು-8 Registered Under No.KA/SK/UDP/1260/2012-2014 Dated from 01-01-2012 to 31-12-2014.

## ಧಾರ್ಮಿಕ ಅನುಷ್ಠಾನ ಜೀವನದ ಒಂದು ಭಾಗವಾಗಬೇಕು

### – ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿ



"ನಾವು ಬಾಲ್ಯಾವಸ್ಥೆಯಲ್ಲಿರುವ ಸಮಯದಲ್ಲಿ ಬಡವರ ಸಂಖ್ಯೆ ಹೆಚ್ಚಿದ್ದು, ಅವರಲ್ಲಿ ಧಾರ್ಮಿಕ ನಂಬಿಕೆ ಹೆಚ್ಚು ಇತ್ತು. ಈಗಿನ ದಿನಗಳಲ್ಲಿ ಬಡತನದ ಪ್ರಮಾಣ ಕಡಿಮೆಯಾಗಿದೆ. ಅದೇ ರೀತಿಯಲ್ಲಿ ಜನರಲ್ಲಿ ಧಾರ್ಮಿಕ ಪ್ರಜ್ಞೆಯೂ ಬಹಳಷ್ಟು ಕಡಿಮೆಯಾಗಿದೆ. ಈ ಸಾಮಾಜಿಕ ಪಿಡುಗು ನಿವಾರಣೆಯಾಗಬೇಕಾಗಿದೆ. ಬ್ರಾಹ್ಮಣರಾಗಿ ಜನಿಸಿದ ನಾವು ನಿತ್ಯಾನುಷ್ಠಾನದ ಜೊತೆಗೆ ಸಂಧ್ಯಾವಂದನೆ, ಗಾಯತ್ರಿ ಪಠಣ, ದೇವರ ಪೂಜಾ ಕೈಂಕರ್ಯಗಳಂತಹ ಧಾರ್ಮಿಕ ಪ್ರಕ್ರಿಯೆಗಳನ್ನು ನಡೆಸುವುದು ಅನಿವಾರ್ಯವಾಗಿದೆ" ಎಂದು ಹೆಬ್ಬೂರು ಶ್ರೀ ಕೋದಂಡಾಶ್ರಮ ಮಠದ ಶ್ರೀ ಕಾಮಾಕ್ಷಿ ಶಾರದಾ ಪೀಠಾಧೀಶ್ವರರಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳು ನುಡಿದಿದ್ದಾರೆ.

ಅವರು ತಮ್ಮ ಚಾತುರ್ಮಾಸದ ಸಮಯದಲ್ಲಿ (ದಿನಾಂಕ 20.07.2014 ರಂದು) ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಿಂದ ಆಗಮಿಸಿದ ಸ್ಥಾನಿಕ ಬಂಧುಗಳನ್ನುದ್ದೇಶಿಸಿ ಆಶೀರ್ವಚನ ನೀಡುತ್ತಾ ಹೀಗೆ ಹೇಳಿದರು.

ಉಡುಪಿ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಮಾಜ ಹಾಗೂ ಮಂಗಳೂರಿನ ಜ್ಞಾನಶಕ್ತಿ ಸುಬ್ರಹ್ಮಣ್ಯ ಸಭಾ ಸಂಘಗಳು ಜಂಟಿಯಾಗಿ ನಿರ್ಣಯಿಸಿದಂತೆ ದಿನಾಂಕ 19.07.2014 ರಂದು ಸಮಾಜಬಾಂಧವರು ಜೊತೆಯಾಗಿ ತುಮಕೂರು ಹೆಬ್ಬೂರಿನ ಘನಪುರಿ ಸಂಸ್ಥಾನದ ಕೋದಂಡಾಶ್ರಮ ಮಠದ ಪೀಠಾಧೀಶ್ವರರಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳವರ ಚಾತುರ್ಮಾಸದಲ್ಲಿ ಭೇಟಿ ನೀಡಿ ಆಶೀರ್ವಚನ ಪಡೆದರು.

**ಸುಖಕರ ಪ್ರಯಾಣದ ಅನುಭವ**

ಶ್ರೀ ಶಾರದಾ ಪತ್ರಿಕೆಯ ಜುಲೈ ತಿಂಗಳ ಸಂಚಿಕೆಯಲ್ಲಿ ಕೊಟ್ಟಿರುವ ಜಾಹೀರಾತಿನಂತೆ ದಿನಾಂಕ 19.07.2014ರ ಶನಿವಾರ ರಾತ್ರಿ 9.30ಕ್ಕೆ ಉಡುಪಿಯ ಶ್ರೀಶಾರದಾ ಮಂಟಪದಿಂದ ಹೊರಟ ಉಡುಪಿಯ ಭಾರತಿ ಮೋಟರ್ಸ್ ಸಂಸ್ಥೆಯ ಸುಖಾಸೀನ ಬಸ್ಸಿನಲ್ಲಿ ಉಡುಪಿಯ ಸಮಾಜ ಬಾಂಧವರು ಪ್ರಯಾಣ ಪ್ರಾರಂಭಿಸಿದರೆ, ಮಾರ್ಗ ಮಧ್ಯದಲ್ಲಿ ಉದ್ಯಾವರ, ಕಟಪಾಡಿಗಳಲ್ಲಿಯೂ ನಮಗಾಗಿ ಕಾದಿದ್ದ ಸಮಾಜ ಬಾಂಧವರನ್ನು ಕರೆದುಕೊಂಡು ಪಡುಬಿದ್ರೆ ತಲುಪಿದೆವು. ಪಡುಬಿದ್ರೆ ಸಂಘದ ಬಂಧುಗಳು ನಮಗಾಗಿ ಕಾಯುತ್ತಿದ್ದು ಅವರನ್ನು ಹಾಗೂ ಸುರತ್ಕಲ್, ಮಂಗಳೂರಿನ ನಮ್ಮವರನ್ನು ಬಸ್ಸಿಗೆ ಸ್ವಾಗತಿಸಿ, ಪ್ರಯಾಣ ಮುಂದುವರೆಸಿದೆವು. ಅಂದು ರಾತ್ರಿ ಕರಾವಳಿಯುದ್ದಕ್ಕೂ ವಿಪರೀತ ಮಳೆಯಾಗಿದ್ದು, ಎಡೆಬಿಡದೆ ಬಂದ ಗಾಳಿ ಮಳೆಯು ಉಡುಪಿಯಿಂದ ಸಕಲೇಶಪುರ ತಲುಪುವವರೆಗೂ ನಮ್ಮನ್ನು ಕಾಡಿತು. ಈ ಮಳೆಯಲ್ಲಿಯೂ ನಮ್ಮ ಹಿರಿಯ ಸಮಾಜಬಾಂಧವರು ಉತ್ಸಾಹದಿಂದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು, ಶ್ರೀ ಸ್ವಾಮೀಜಿಯವರ ಮೇಲಿನ ಶ್ರದ್ಧಾಭಕ್ತಿಗೆ ನಿದರ್ಶನವಾಗಿತ್ತು.

(4ನೇ ಪುಟಕ್ಕೆ...)

**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ**
ಇದರ ಆಶ್ರಯದಲ್ಲಿ
**ಸೌರ ಋಗುಪಾಕರ್ಮವು**

ತಾ.07-09-2014ರಂದು ಆದಿತ್ಯವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 9-30ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

– ಕಾರ್ಯದರ್ಶಿ

ಸಮಾಜ ಬಾಂಧವರಿಗೆ ಪ್ರವಾಸದ ಸುವರ್ಣಾವಕಾಶ

**2 ದಿನದ ಗೋವಾ ಪ್ರವಾಸ ಕಾರ್ಯಕ್ರಮ**

ದಿನಾಂಕ 13, 14 ಸೆಪ್ಟೆಂಬರ್ 2014ರಂದು

ಎಲ್ಲಾ ಖರ್ಚು ಸೇರಿ ರೂ.5,500/-



ನಿರ್ಮಲಾ ಟ್ರಾವೆಲ್ಸ್ ಸಂಸ್ಥೆಯ ಸಹಯೋಗದೊಂದಿಗೆ
**ಪ್ಯಾಕೇಜ್ ಟೂರ್**



ಉಡುಪಿ-ಪಡುಬಿದ್ರಿ-ಮಂಗಳೂರಿನ ಸಮಾಜಬಾಂಧವರ ಒಗ್ಗೂಡುವಿಕೆಯಿಂದ
ಗೋವಾದ ಚಾರಿತ್ರಿಕ, ಪ್ರಕೃತಿ ವೀಕ್ಷಣಾ ಪ್ರವಾಸಿ ತಾಣಗಳ ಭೇಟಿ

**ಆಸಕ್ತ ಸಮಾಜ ಬಾಂಧವರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಸಂಪರ್ಕಿಸಬೇಕಾದ ವಿಳಾಸ :**
1. ಶ್ರೀ ಸುಧಾಕರ್ ರಾವ್ ಬೆಳ್ಳೆ – 9845193103
2. ಶ್ರೀ ದಿವಾಕರ್ ರಾವ್ ಎಮ್.ಕೆ. – 9902169119
3. ಶ್ರೀ ವಿಶ್ವನಾಥ ಶ್ಯಾನುಭೋಗ್ – 9448724161
4. ಶ್ರೀ ಪ್ರಕಾಶ್ ರಾವ್ ಕೋಲ್ಪೆ – 9481267269



ಸೆಪ್ಟೆಂಬರ್ 12ರ ಶುಕ್ರವಾರ ರಾತ್ರಿ 8 ಗಂಟೆಗೆ ಮಂಗಳೂರಿನಿಂದ ಹೊರಡುವುದು, 9 ಗಂಟೆಗೆ ಪಡುಬಿದ್ರಿ, 9-30ಕ್ಕೆ ಉಡುಪಿಯಿಂದ ಗೋವಾಕ್ಕೆ ಪ್ರವಾಸ. ಸೆಪ್ಟೆಂಬರ್ 15ರ ಸೋಮವಾರ ಬೆಳಿಗ್ಗೆ 6-00 ಗಂಟೆಗೆ ಮರಳಿ ಉಡುಪಿ-ಮಂಗಳೂರು ತಲುಪುವಂತೆ ವ್ಯವಸ್ಥೆ ಮಾಡಲಾಗಿದೆ.

**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 02-09-2014**

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ| ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶಾನುಭಾಗ್, ವಿ.ಪಿ.ನಗರ
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಇಲ್ಲೊಂದು ಧಾರ್ಮಿಕ ಸಂಸ್ಥೆಯಲ್ಲಿ ಧ್ವಜ ಸ್ತಂಭದ ಮುಂಭಾಗದಲ್ಲಿ ಯಾವುದೇ ಮಾಡು-ಚಪ್ಪರ ಇಲ್ಲದ ಸಂದರ್ಭದಲ್ಲಿ ನೆಲಕ್ಕೆ ಶಿಲೆಕಲ್ಲು (ಪಾದೆಕಲ್ಲು) ಹಾಸುವ ದಾನಸೇವೆಯನ್ನು ಸ್ವಯಂ ಪ್ರೇರಿತರಾಗಿ ದಾನಿಗಳೊಬ್ಬರು ಮಾಡಿರುತ್ತಾರೆ. ಆ ಸಂದರ್ಭದಲ್ಲಿ ಆ ದಾನಿಗಳ ಈ ಸೇವೆಯಿಂದ ಸಂಸ್ಥೆಯಲ್ಲಿ ನಡೆದ ಸಮಾರಂಭಗಳಲ್ಲಿ ಬಹಳ ಪ್ರಯೋಜನವೂ ಆಗಿದೆ. ಈ ಬಗ್ಗೆ ಎಲ್ಲರೂ ದಾನಿಗಳನ್ನು ಕೊಂಡಾಡಿದ್ದಾರೆ.

ಇತ್ತೀಚಿಗೆ ಸಂಸ್ಥೆಯ ಆಡಳಿತ ಮಂಡಳಿಯು ಬದಲಾಗಿ ಆ ಸ್ಥಳಕ್ಕೆ 6-7 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡು (ತಗಡು ಚಪ್ಪರ) ನಿರ್ಮಿಸಿ ಮತ್ತೊಂದು ಅಭಿವೃದ್ಧಿ ಕಾರ್ಯವನ್ನು ಕೈಗೊಂಡಿದೆ. ಆಗ ಅಭಿವೃದ್ಧಿ ಪರ ಚಿಂತಕರೊಬ್ಬರು ಈ ಚಪ್ಪರದಡಿಯಲ್ಲಿರುವ ಈ ಶಿಲೆಕಲ್ಲು ಇರುವುದಕ್ಕಿಂತ ಒಳ್ಳೆಯ ನಯವಾದ ಗ್ರಾನೈಟ್ ಕಲ್ಲು ಹಾಕಿರಿ. ಆಗ ಸಭಾಭವನದ ಅಂದ ಇನ್ನೂ ಹೆಚ್ಚುವುದೆಂದು ಸಲಹೆ ನೀಡಿದಾಗ ಆಡಳಿತ ಮಂಡಳಿಯು ಗ್ರಾನೈಟ್ ಕಲ್ಲು ಹಾಕುವರೆ ಬೇರೊಬ್ಬ ದಾನಿಗಳನ್ನು ಹುಡುಕಿ ಅವರನ್ನು ಒಪ್ಪಿಸಿ ಕೆಲಸವನ್ನು ಪ್ರಾರಂಭಿಸಿತು.

ಅದಕ್ಕಾಗಿ ಮೊದಲಿನ ಹಾಸುಕಲ್ಲುಗಳನ್ನು ಜೆ.ಸಿ.ಬಿ ತಂದು ಎಬ್ಬಿಸಿಯೂ ಆಯ್ತು. ಗ್ರಾನೈಟ್ ಕಲ್ಲು ಕುಳ್ಳಿರಿಸಲು ಅಡಿ ಕಾಂಕ್ರೀಟೀಕರಣವೂ ಮುಕ್ತಾಯವಾಗಿದೆ.

ಇದೀಗ ಮೊದಲು ಶಿಲೆಕಲ್ಲು ದಾನ ನೀಡಿದ ವ್ಯಕ್ತಿಯು ಈ ಕಾರ್ಯಕ್ಕೆ ಅಕ್ಷೇಪಣೆ ವ್ಯಕ್ತಪಡಿಸಿದರು. ಅವರ ಹೇಳಿಕೆಯಂತೆ "ನಾನು ದಾನ ನೀಡಿ 5 ವರ್ಷವೂ ಆಗಿಲ್ಲ. ಬಹಳಷ್ಟು ಕಷ್ಟದಿಂದ ಸಂಪಾದಿಸಿದ ನನ್ನ ಸಂಪಾದನೆಯನ್ನು ದೇವತಾ ಕಾರ್ಯಕ್ಕೆ ವಿನಿಯೋಗಿಸಿದ್ದೇನೆ. ನನ್ನಲ್ಲಿ ಒಂದು ಮಾತು ಹೇಳದೆ ನೀವು ಈ ಕಲ್ಲುಗಳನ್ನು ತೆಗೆಯಬಾರದಿತ್ತು. ನಿಮಗೆ ಈ ನೆಲ ಇನ್ನೂ ಚಂದವಾಗಬೇಕಾದ ಪಕ್ಷದಲ್ಲಿ ನಾನೇ ಆ ಕಲ್ಲಿನ ಮೇಲ್ಮೈಯನ್ನು ನುಣುಪು ಮಾಡಿ ಕೊಡುತ್ತಿದ್ದೆ" ಎಂದು ತಕರಾರು ಮಾಡಿದರು. ಈಗ ಸಂಸ್ಥೆಯ ಆಡಳಿತ ಮಂಡಳಿಯು ಪೇಚಿಗೆ ಸಿಲುಕಿದೆ.

ದಾನಿಗಳೊಬ್ಬರು ಸಂಸ್ಥೆಗೆ ನೀಡಿದ ದಾನದ ನಂತರ ಆತನಿಗೆ ಆ ವಿಚಾರವಾಗಿ ಯಾವುದೇ ತಕರಾರು ಮಾಡುವಂತಿಲ್ಲವೇ? ಅಥವಾ ಹಿಂದಿನ ದಾನಿಗಳ ದಾನವೇ ಉಳಿಯಬೇಕಾದರೆ ಅಭಿವೃದ್ಧಿ ಕಾರ್ಯವೆಂಬುದು ಮರೀಚಿಕೆಯಾಗಿಯೇ ಉಳಿಯಬೇಕೇ? ಇದು ಚಿಂತಿಸಬೇಕಾದ ವಿಚಾರ......

# ಕನ್ನಡ ಕವಿಕಾವ್ಯ ಪರಿಚಯ-೧೧ : ಮಹಾಕವಿ ಹರಿಹರ ದೇವ-ಹರಿದಾಸ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

(ಕಳೆದ ಸಂಚಿಕೆಯಿಂದ)

**ಗಿರಿಜಾಕಲ್ಯಾಣ ಮಹಾಪ್ರಬಂಧಂ:-** ಹರಿಹರನ 'ರಗಳೆ' ಛಂದಸ್ಸಿನ ಕಾವ್ಯಗಳು ಉತ್ತಮೋತ್ತಮ ಕಿರು ಕಾವ್ಯಗಳಾಗಿವೆ. ಪಂಡಿತ ಪಾಮರರೆಲ್ಲರೂ ಮೆಚ್ಚುವಂತವುಗಳೇ ಆಗಿವೆ. ಆದರೆ ಅವನ ಪಾಂಡಿತ್ಯದ ಬಗ್ಗೆ 'ಕರುಬು'ತ್ತಿದ್ದ ಪರಸಮಯಿಗಳು ಇವನನ್ನು 'ರಗಳೆಯ ಕವಿ' ಎಂದು ಅಪಹಾಸ್ಯ ಮಾಡಿದರು. ಈ ಕೆಟ್ಟ ಹೆಸರನ್ನು ತೊಡೆದುಕೊಳ್ಳಲೋಸುಗ ಈತನು "ಗಿರಿಜಾ ಕಲ್ಯಾಣ ಮಹಾಪ್ರಬಂಧಂ" ಎಂಬ ಸಂಸ್ಕೃತ ಭೂಯಿಷ್ಟವಾದ ಪ್ರೌಢ ಚಂಪೂ ಗ್ರಂಥವನ್ನು ಬರೆದನು. ಇದನ್ನು ಪಂಡಿತ ಪಾಮರರೆಲ್ಲರೂ ಮೆಚ್ಚಿ ಹೊಗಳಿದರು, ಮಹಾಕವಿ ದಂಡಿಯು ತನ್ನ 'ಕಾವ್ಯಾದರ್ಶ' ದಲ್ಲಿ ಗದ್ಯ ಪದ್ಯ ಮಯಂ ಕಾವ್ಯಂ ಚಂಪೂರಿತ್ಯಭಿಧೀಯತೇ ಎಂದಿರುವನು.

ಕಥಾ ವಸ್ತುವನ್ನು ಹೃದಯಂಗಮವಾಗಿ, ಚಿತ್ತಾಕರ್ಷಕವಾಗಿ, ರಮಣೀಯವಾಗಿ ಹೇಳುವ ರೀತಿಗೆ "ಶೈಲಿ" ಎನ್ನುವರು. ಲಾಕ್ಷಣಿಕರು ಇದನ್ನೇ "ರೀತಿ" ಎಂದರು. ಆಗಲೇ 'ರೀತಿರಾತ್ಮಾ ಕಾವ್ಯಸ್ಯ' ಎಂಬ ಶೈಲಿಯಾಗಿದೆ. ತನ್ನ ಕಾವ್ಯದ ಆತ್ಮವಾದ 'ರೀತಿ' ಯಾ 'ಶೈಲಿ'ಯಾಗಿ ಗದ್ಯ ಪದ್ಯ ಮಿಶ್ರವಾದ 'ಚಂಪೂ' ವನ್ನೇ ಹರಿಹರನು ಆಯ್ದುಕೊಂಡನು. ಅಂತೆಯೇ ಗಿರಿಜಾ ಕಲ್ಯಾಣದಲ್ಲಿ ಸ್ರಗ್ಧರಾ, ಮಹಾಸ್ರಗ್ಧರಾ, ಶಾರ್ದೂಲವಿಕ್ರೀಡಿತ ಮುಂತಾದ ಪ್ರೌಢ ವೃತ್ತಗಳನ್ನೂ, ಕಂದಗಳನ್ನೂ ಆಯ್ದು ಕೊಂಡನು. ನಡು ನಡುವೆ ಸುಲಭ ಶೈಲಿಯ, ಪ್ರಾಸಬದ್ಧವಾದ ಗದ್ಯಗಳನ್ನು ಬಳಸಿ ಕತೆಯ ಓಘವನ್ನು ಹೆಚ್ಚಿಸಿದ್ದಾನೆ. ಗದ್ಯಕ್ಕೆ ಉದಾ:- "ನೋಳ್ಪರ ಕಣ್ಗೆ ಶೀತಳಮಯಮ ಸುಧಾರೋಚಿಗಳಂ ಬೀರುವ ಚಂದ್ರಮನಂತೆ, ಮುಟ್ಟುವರ ಮೆಯ್ಗೆ ತೀವ್ರ ಪ್ರತಾಪ ಮಂಕುಡುವ ಸೂರ್ಯನಂತೆ, ಪೊಗಳ್ವರ ನಾಲಿಗೆಗಮೃತದಂತೆ, ಕೇಳ್ವರ ಕಿವಿಗೆ ಮಧುರವಾಣಿಯಂತೆ, ನೆನೆವರ ಮನಕ್ಕೆ ನಿರುಪಾಧಿಕ ಜ್ಯೋತಿಯಂತೆ ಒಪ್ಪುತಿರ್ದ ರುದ್ರನ ಮನೋಹರ ಮೂರ್ತಿಯಂ ನೋಡಿ ನೋಡಿ ತಣಿಯದೆ, ಸೋಂಕಿ ಸೋಂಕಿ ಸವಿಯದೆ, ಪೊಗಳ್ದು ಪೊಗಳ್ದು ತೀರದೆ, ನೆನೆದು ನೆನೆದು ನೆರೆಯದೆ, ನಡೆತಂದು ಪಾರ್ವತೀ ದೇವಿ ಪೊಚ್ಚ ಪೊಸ ಪೂಗಳನಚ್ಚರಿಮಿಗೆ ತಂದು ತಂದಂದಂದಿಗೆ ಚಂದ್ರಧರನಂ, ಕಳಾನಿಧಿಯಮಂ, ವಿಳಾಸದಿಂದಾರ್ತದಿಂ, ಹತ್ತೆ ಸಾರ್ದು ಮತ್ತೆ ಮತ್ತೆ ಮಾಣದೆ" - ಪೂಜಾ ವರ್ಣನಂ.

ವೃತ್ತಕ್ಕೆ ಉದಾಹರಣೆ:- ಚಂಪಕಮಾಲಾ ವೃತ್ತ-"ಎಲೆಲೆಲೆ ನೋಡನೋಡೆ ಕೆಲನುಂ ನೆಲನುಂ ಬಲನುಂದವಗ್ನಿ ಸು-| ಟ್ಟೊಲೆಯ ವೊಲಾಗೆ ಮೆಟ್ಟಿದಡಿಯೆತ್ತಿದ ಕಲುರೆ ಸೀಮೆ ನಿಂದಿರಲ್| ಚಲಿಯಿಸಲಾರದಾ ಹಸ್ತಮನೆತ್ತುತೆ ಘೀಳಿಸುತ್ತೆ ತಾ | ನೊಲೆದುದುಂ ಚೇಷ್ಟೆಗುಂದಿದುದು ಜೋಲ್ದುದು ಬಿಳ್ದುದು ಬೆಂದುದೊಂದಿಭಃ||"

ಮತ್ತೇಭವಿಕ್ರೀಡಿತ ವೃತ್ತ :- ನಡೆಯಲ್ಕೊಂದಡಿಯಿಟ್ಟು ಕಾಯಗದಂ ನೆಲನಂ ಕಲ್ಮಟ್ಟೆ ಚುಯ್ಯೆಂದು ಬೆಂ-|ದೊಡೆ ಮತ್ತೊಂದಡಿಯತ್ತಲಾರದಳಲಿಂ ಕಣ್ಮುಚ್ಚಿ ಹಸ್ತಾಗ್ರಮಂ| ಕಡೆವಾಯೊಳ್ ಸೆರೆಯಿಟ್ಟು ನೆತ್ತಿ ಬಿರಿಯುತ್ತುಂ ಮುತ್ತುಗಳ್ ಸುತ್ತಲುಂ| ಸಿಡಿಯುತ್ತಿರ್ಪಿನದೊಂದತಿ ಮದೇಭಂ ಭೀಷ್ಮದೊಳ್ ಗ್ರೀಷ್ಮದೊಳ್ |"

ಭೀಕರವಾದ ಬಿಸಿಲಿನಿಂದ ಕೂಡಿದ ಗ್ರೀಷ್ಮಋತುವಿನಲ್ಲಿ ಕಾಲನ್ನು ನೆಲದ ಮೇಲಿಟ್ಟು ನಡೆಯಲು ಸಾಧ್ಯವಾಗದೆ ಗೋಳಾಡುತ್ತಿದ್ದ ಆನೆಗಳ ಕುರಿತು ಈ ಎರಡು ಪದ್ಯಗಳು ವರ್ಣಿಸುತ್ತವೆ.

(ಮುಂದುವರಿಯುವುದು...)

# ಕ್ಷೇತ್ರ ದರ್ಶನ : ಶ್ರೀ ಕಾಮಾಕ್ಷೀ ಶಾರದಾಪೀಠ ಮತ್ತು ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರು

ವರದಿ : **ಜಿ.ಕೆ.ಕೋಲ್ಪೆ.**

ತಾ:19.07.2014 ರಂದು ಬಸ್ಸಿನಲ್ಲಿ ಉಡುಪಿ ಶ್ರೀಶಾರದಾ ಮಂಟಪದಿಂದ ರಾತ್ರಿ ಒಂಭತ್ತು ಗಂಟೆಗೆ ಹೊರಟು ದಾರಿ ಮಧ್ಯೆ ಪಡುಬಿದ್ರೆ, ಹೆಜಮಾಡಿ, ಸುರತ್ಕಲ್ ಮತ್ತು ಮಂಗಳೂರಿನ ನಮ್ಮ ಸಮಾಜ ಬಾಂಧವರನ್ನು ಒಳಗೊಂಡು ರಾತ್ರಿ ಇಡೀ ಪ್ರಯಾಣಿಸಿ ತಾ.20 ರಂದು ಬೆಳಗ್ಗೆ ಶ್ರೀ ಕ್ಷೇತ್ರ ತಲುಪಿದೆವು. ಮಠದ ವ್ಯವಸ್ಥಾಪಕರ ಹಾಗೂ ಆಸ್ಥಾನ ಪುರೋಹಿತ ಶ್ರೀ ಸತ್ಯನಾರಾಯಣ ಶರ್ಮರು ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿ, ಪಕ್ಕದಲ್ಲಿರುವ ಮಠದ ಛತ್ರದಲ್ಲಿ ವಸತಿ, ಉಪಹಾರಗಳ ವ್ಯವಸ್ಥೆ ಮಾಡಿದರು. ಸ್ನಾನಾದಿ ಪ್ರಾತಃ ಕರ್ಮಗಳನ್ನು ಮುಗಿಸಿ ಪೂಜ್ಯ ಗುರುಗಳ ಭೇಟಿಮಾಡಿದೆವು. ಮಠಕ್ಕೆ ಹೊರೆಕಾಣಿಕೆಯನ್ನು ಸಮರ್ಪಿಸಿದೆವು. ಶ್ರೀ ಗುರುಗಳು ನಮ್ಮನ್ನೆಲ್ಲಾ ಕಂಡು ಸಂತೋಷಭರಿತರಾಗಿ, ವೈಯಕ್ತಿಕ ಯೋಗಕ್ಷೇಮ ವಿಚಾರಿಸಿ, ಮಠದ ಮೇಲಿನ ಅಂತಸ್ತಿನಲ್ಲಿ ಆಯೋಜಿಸಿದ "ಆಶೀರ್ವಚನ" ಕಾರ್ಯಕ್ರಮಕ್ಕೆ ಉಪಸ್ಥಿತರಾಗಲು ತಿಳಿಸಿದರು. ಸಭಾ ಕಾರ್ಯಕ್ರಮದಲ್ಲಿ ಮಠದ ವ್ಯವಸ್ಥಾಪಕರು ಪ್ರಾಸ್ತಾವಿಕ ಮಾತುಗಳೊಂದಿಗೆ ಕ್ಷೇತ್ರದ ಹಾಗೂ ಗುರು ಪೀಠದ ಪರಂಪರೆ ವಿಶೇಷವಾಗಿ, ಅಪೂರ್ವ ಮೇರು ಪ್ರಸ್ತಾರದ ಚಿದಂಬರ ಶ್ರೀ ಚಕ್ರದ ಬಗ್ಗೆ ವಿವರವಾಗಿ ತಿಳಿಸಿದರು. ಗುರುಗಳು ನಮ್ಮನ್ನೆಲ್ಲಾ ಉದ್ದೇಶಿಸಿ, ಅವರ ಪ್ರಥಮ ಚಾತುರ್ಮಾಸ ಆಚರಣೆಯ ಶುಭ ಸಂದರ್ಭದಲ್ಲಿ, ಸ್ಥಾನಿಕ ಸಮಾಜದ ಯತಿಯೋರ್ವರನ್ನು ಶೃಂಗೇರಿ ಜಗದ್ಗುರುಗಳು ಆಯ್ಕೆ ಮಾಡಿ ಈ ಪೀಠಕ್ಕೆ ಮಠಾಧಿಪತಿಗಳಾಗಿ ಮಾಡಿದ್ದು ನಿಮಗೆಲ್ಲಾ ತಿಳಿದದ್ದೇ. ಮುಂದಕ್ಕೆ ಸಮಾಜವು ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸುವರೆ ಸಹಕರಿಸುತ್ತಾ, ಪ್ರತಿ ವರ್ಷ ಚಾತುರ್ಮಾಸ ಹಾಗೂ ನವರಾತ್ರಿ ಸಮಯದಲ್ಲಿ ಕ್ಷೇತ್ರ ದರ್ಶನ ಮಾಡಬೇಕಾಗಿ ಅಪ್ಪಣೆ ಇತ್ತರು. ಈ ಕ್ಷೇತ್ರ ದರ್ಶನದಿಂದ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಮಂಗಳವಾಗಲೆಂದು ಹಾರೈಸಿದರು. ನಮ್ಮ ಪರವಾಗಿ, ಹಿರಿಯರಾದ ಪಾವಂಜೆ ಭವಾನಿಶಂಕರ ಉಪಾಧ್ಯಾಯರು ಮಠಗಳು ನಮ್ಮ ಆಚರಣೆ-ಸಂಸ್ಕೃತಿ ಬಗ್ಗೆ ಮಾತನಾಡಿ, ಮುಂದಕ್ಕೂ ನಮ್ಮ ಸಂಬಂಧ ಬೆಳೆಸಿ, ಮಾರ್ಗದರ್ಶನಕ್ಕೋಸ್ಕರ ಇಲ್ಲಿಗೆ ಭೇಟಿ ಕೊಡುತ್ತೇವೆ ಎಂದು ಭರವಸೆ ಇತ್ತರು. ಗುರುಗಳ ಮಂತ್ರಾಕ್ಷತೆ ಪಡೆದು, ಚಾತುರ್ಮಾಸದ ಅಂಗವಾಗಿ ಗುರು ಪೂರ್ಣಿಮೆಯಂದು ಪ್ರಾರಂಭವಾದ "ಋಕ್‌ಸಂಹಿತಾಯಾಗ"ದ ಪೂರ್ಣಾಹುತಿ ನಡೆಯುವ ಯಜ್ಞಶಾಲೆಯ ಹತ್ತಿರ ನೆರೆದು ಅಭೂತಪೂರ್ವ ಯಾಗವನ್ನು ವೀಕ್ಷಿಸಿ ಧನ್ಯರಾದೆವು.

ಯಾಗದ ಪೂರ್ಣಾಹುತಿ ನಂತರ ದೇವರ ಪೂಜಾದಿಗಳು ನಡೆದು, ಗುರು ಮಾಧವಾಶ್ರಮ ಸ್ವಾಮಿಗಳು ಈ ಯಾಗದ ಮಹತ್ವ ತಿಳಿಸಿ, ಯಾಗ ಕೈಂಕರ್ಯದ ರೂವಾರಿಗಳಾದ ಪೌರೋಹಿತ್ಯದ ಪ್ರತಿಯೋರ್ವರ ಪಾಂಡಿತ್ಯವನ್ನು ಪ್ರಶಂಸಿಸುತ್ತಾ, ಶಾಲು ಹೊದಿಸಿ ಫಲ ಮಂತ್ರಾಕ್ಷತೆಯೊಂದಿಗೆ ಗೌರವಿಸಿದರು. ನಮ್ಮ ಸಮಾಜದ ಪರವಾಗಿ, ಉಡುಪಿಯಲ್ಲಿರುವ ಪಾವಂಜೆ ವೇದಮೂರ್ತಿ ಭವಾನಿಶಂಕರ ಉಪಾಧ್ಯಾಯರನ್ನು ಹಾಗೂ ನಮ್ಮ ಸಮಾಜದ ಹೆಚ್ಚಿನ ದೇವಸ್ಥಾನಗಳ ಜೀರ್ಣೋದ್ಧಾರದ ರೂವಾರಿಯಾದ ಶ್ರೀ ಕರುಣ ರಾವ್ ಬೆಳ್ಳೆಯವರನ್ನು ಗುರುಗಳು ಗೌರವಿಸಿದರು.

ತೀರ್ಥಪ್ರಸಾದದ ನಂತರ, ನೆರೆದ ಎಲ್ಲ ಭಕ್ತಾದಿಗಳಿಗೆ ಪ್ರಸಾದ ಭೋಜನ ನೆರವೇರಿತು. ಈ ಕ್ಷೇತ್ರ ದರ್ಶನದಿಂದ ನಾವೆಲ್ಲಾ ಸಂತೋಷಭರಿತರಾಗಿ, ಮಧ್ಯಾಹ್ನ ನಂತರ ಸುಮಾರು 2.30 ಗಂಟೆಗೆ ಹೊರಟು, ದಾರಿ ಮಧ್ಯೆ ಸಕಲೇಶಪುರದಲ್ಲಿ ರಾತ್ರಿಯ ಉಪಹಾರ ಮುಗಿಸಿ, ಮಧ್ಯರಾತ್ರಿ 12.30 ಗಂಟೆಗೆ ಉಡುಪಿ ತಲುಪಿದೆವು. ಈ ಪ್ರಯಾಣವನ್ನು ಆಯೋಜಿಸಿದ ಶಾರದಾ ಮಂಟಪದ ಪದಾಧಿಕಾರಿಗಳಿಗೆ ಅಭಿನಂದನೆಗಳು.

ಶ್ರೀ ಕ್ಷೇತ್ರ ಹೆಬ್ಬೂರಿನಲ್ಲಿ ಎಲ್ಲಾ ಅನುಕೂಲತೆಗಳನ್ನು ಒದಗಿಸಿದ ವ್ಯವಸ್ಥಾಪಕ ಶ್ರೀ ಸತ್ಯನಾರಾಯಣ ಶರ್ಮರಿಗೆ ಕೃತಜ್ಞತೆಗಳು.

### ಕನಸಿನ ಭಾರತ

ಜಗದಲಿ ಮಾದರಿಯಾಗಲಿ ದೇಶ
ಭಾರತ ಸಂಸ್ಕೃತಿ ಜಗದಲಿ ಹರಡಲಿ|
ಆರ್ಥಿಕ ಪ್ರಗತಿ ಹೊಂದಲಿ ದೇಶ
ಭಾರತ ಜಗದಲಿ ಬಲಿಷ್ಠವಾಗಲಿ||೧||
    ಶಿಕ್ಷಣ ಕ್ಷೇತ್ರದಿ ಮಾದರಿ ದೇಶ
    ಭಾರತಕೆಲ್ಲೆಡೆ ಕಲಿಯಲು ಬರಲಿ|
    ಸರ್ವರೂ ಒಂದೇ ಎನ್ನುವ ದೇಶ
    ಭಾರತದೈಕ್ಯತೆ ವಿಶ್ವದಿ ಮೆರೆಯಲಿ||೨||
ಸಜ್ಜನರಿಂದಲೆ ತುಂಬಲಿ ದೇಶ
ನೆಮ್ಮದಿ ಎಲ್ಲೆಡೆ ಮಾಡುತ ಬರಲಿ|
ಬುದ್ಧ, ಗಾಂಧಿಯರು ಜನಿಸಿದ ದೇಶ
ಸತ್ಯ, ಅಹಿಂಸೆಯು ಎಲ್ಲೆಡೆ ಕಾಣಲಿ||೩||
    ರೈತರು, ಕೃಷಿಕರು ತುಂಬಿದ ದೇಶ
    ಬದುಕಿನ ಬಂಡಿಯನೆಲ್ಲರು ಎಳೆಯಲಿ|
    ರಾಮ ರಾಜ್ಯದ ಕನಸಿನ ದೇಶ
    ಕನಸಿನ ಭಾರತ ನಿಜ ನೆನಸಾಗಲಿ||೪||

**ಗೋ.ರಾ.ಕೆ.ಕಡಬ**

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ| ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್ ರಾವ್ ಕಬ್ಯಾಡಿ, ಶ್ರೀ ಪ್ರಫುಲ್ಲಚಂದ್ರರಾವ್ ಉಡುಪಿ, ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು, ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು ಆರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ

## ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ ರೂ.5 ಲಕ್ಷ ದೇಣಿಗೆ



ಜೀರ್ಣೋದ್ಧಾರಗೊಳ್ಳುತ್ತಿರುವ ಪುತ್ತೂರು ತಾಲೂಕು ಕೊಡಿಂಬಾಡಿ ಮಠದಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳದಿಂದ ಮಂಜೂರಾದ ರೂ.5 ಲಕ್ಷ ಮೊತ್ತದ ಚೆಕ್‌ನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪುತ್ತೂರು ತಾಲೂಕು ಯೋಜನಾಧಿಕಾರಿ ಶ್ರೀ ವಸಂತರವರು ದೇವಳದ ಆಡಳಿತ ಮಂಡಳಿ ಅಧ್ಯಕ್ಷ ಟಿ. ಅಣ್ಣಪ್ಪಯ್ಯ ಇವರಿಗೆ ಹಸ್ತಾಂತರಿಸಿದರು. ಗಣ್ಯರು ಪಾಲ್ಗೊಂಡಿದ್ದ ಈ ಸಮಾರಂಭದಲ್ಲಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಟಿ.ಅಣ್ಣಪ್ಪಯ್ಯ, ಪ್ರಧಾನ ಕಾರ್ಯದರ್ಶಿ ಎಮ್.ನಾಗೇಶ್ ಶರ್ಮ ಮತ್ತು ದೇವಳದ ಆಡಳಿತ ಮಂಡಳಿಯ ಸದಸ್ಯರು ಆಗಮಿಸಿದ ಎಲ್ಲರನ್ನೂ ಸ್ವಾಗತಿಸಿ ಉಪಚರಿಸಿದರು.

## ಹಿರಿಯಮ್ಮನಿಂದ ಬೇಡಿದ ಆಶೀರ್ವಾದ



ದಿನಾಂಕ 3-8-2014 ರಂದು ಶ್ರೀ ಶಂಕರ ಪ್ರತಿಷ್ಠಾನದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಶ್ರೀ ಭುವನೇಂದ್ರ ಕಾಲೇಜಿನ ಬಳಿ ಅರಬಿಗುಂಡಿ ದಿ| ಅಪ್ಪಾಜಿರಾಯರ ಧರ್ಮಪತ್ನಿ ಶ್ರೀಮತಿ ರಾಜಮ್ಮರವರನ್ನು ಭೇಟಿಯಾಗಿ ಶಾಲುಫಲ ತಾಂಬೂಲ ಅರ್ಪಿಸಿ ವಂದಿಸಿ ಆಶೀರ್ವಾದ ಬೇಡಿದರು. ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಸಾವಿತ್ರಿಮನೋಹರ್ ಶಾಲು ಹೊದಿಸಿದರು. ಶ್ರೀ ಮುರಳೀಧರ ಶರ್ಮ ಫಲತಾಂಬೂಲ ಅರ್ಪಿಸಿದರು. ಪ್ರತಿಷ್ಠಾನದ ವಿದ್ಯಾನಿಧಿಗೆ ರಾಜಮ್ಮನವರು ಪ್ರಥಮ ದೇಣಿಗೆ ನೀಡಿ ಹರಸಿದ್ದರಿಂದ 10 ತಿಂಗಳಲ್ಲಿ ಒಂದು ಲಕ್ಷ ರೂಪಾಯಿಗೂ ಅಧಿಕ ಠೇವಣಿ ಸಂಗ್ರಹವಾಗಿದೆ ಎಂದು ಹೇಳಿದ ವಿದ್ಯಾನಿಧಿಯ ಸಂಚಾಲಕ ಶ್ರೀ ವಿ.ಮನೋಹರರಾವ್ ಕೃತಜ್ಞತೆ ಸಲ್ಲಿಸಿದರು. ಭೇಟಿ ನೀಡಿದ ಪದಾಧಿಕಾರಿಗಳೆಲ್ಲಾ ಹಿರಿಯರಾದ ರಾಜಮ್ಮನಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು. ಶ್ರೀ ವಸಂತರಾವ್ ಮತ್ತು ಶ್ರೀಮತಿ ಸೀತಾಲಕ್ಷ್ಮಿ ದಂಪತಿಗಳು ಬಂದವರನ್ನು ಸತ್ಕರಿಸಿ ಬೀಳ್ಕೊಂಡರು.

ವರದಿ : **ಶ್ರೀಮತಿ ಸಾವಿತ್ರಿ ಮನೋಹರ್**

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ ಪ್ರತಿಭಾ ಪುರಸ್ಕಾರ

2013-14ರ ಸಾಲಿನ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ 85%ಕ್ಕಿಂತ ಹೆಚ್ಚು (ವಿಶಿಷ್ಟ ಶ್ರೇಣಿ) ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ ಕುಳಾಯಿ ಇದರ ವತಿಯಿಂದ ದಿನಾಂಕ 12-10-2014ರ ಭಾನುವಾರ ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ಮಂಗಳೂರು ಇಲ್ಲಿ ನಡೆಯುವ ನಾಡಹಬ್ಬದಂದು ಪುರಸ್ಕರಿಸಲಾಗುವುದು. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಅರ್ಹ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿಯ ಪ್ರತಿ, ವಿಳಾಸ, ದೂರವಾಣಿ ಸಂಖ್ಯೆ, ಭಾವಚಿತ್ರ ಇತ್ಯಾದಿಗಳನ್ನು ದಿನಾಂಕ 25-9-2014ರ ಒಳಗೆ ಕೋಂ.ಕೆ ಸದಾಶಿವ ಶಾಸ್ತ್ರಿ, 3-68(7), ಶ್ರೀ ವಿಷ್ಣುಮೂರ್ತಿ ದೇವಸ್ಥಾನ ರಸ್ತೆ, ಕುಳಾಯಿ, ಮಂಗಳೂರು-575019 ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

## ಪಿ.ಯು.ಸಿ.ಯಲ್ಲಿ ಉತ್ಕೃಷ್ಟ ಶ್ರೇಣಿಯಲ್ಲಿ ತೇರ್ಗಡೆ



| | | |
|---|---|---|
| ಹೆಸರು | : | **ನಿಕಿತಾ ರಾವ್** |
| ತಂದೆ | : | ಜಯಚಂದ್ರ ರಾವ್ |
| ತಾಯಿ | : | ಸ್ವಪ್ನ ಜೆ. ರಾವ್ |
| ವಿಳಾಸ | : | ಬೆಳ್ಮಣ್ ಕಾರ್ಕಳ |
| ಶಾಲೆ | : | ಕೆನರಾ ಪಿ.ಯು ಕಾಲೇಜು ಮಂಗಳೂರು |
| ಅಂಕ | : | 582/600 (ವಿಜ್ಞಾನ) |
| ಶೇಕಡಾ | : | 97% |

## ಕುಂಜಿಬೆಟ್ಟು : ವರಮಹಾಲಕ್ಷ್ಮೀ ವ್ರತ ಆಚರಣೆ



ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಮಹಿಳಾ ವೇದಿಕೆಯ ವತಿಯಿಂದ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಪೂಜಾ ಧಾರ್ಮಿಕ ಕಾರ್ಯಕ್ರಮವು ತಾ.08-08-2014ರ ಶುಕ್ರವಾರ ಸಾಯಂಕಾಲ 4-30ರಿಂದ ಜರಗಿತು. ಶ್ರೀ ನಾಗಭೂಷಣ ಶಾಸ್ತ್ರಿಯವರು ನಡೆಸಿಕೊಟ್ಟ ಪೂಜಾ ಕಾರ್ಯಕ್ರಮದ ಕರ್ತೃಗಳಾಗಿ ಶ್ರೀ ಟಿ. ಸುರೇಶ್ ರಾವ್ ನಿಟ್ಟೂರು ದಂಪತಿಗಳು ಭಾಗವಹಿಸಿದ್ದರು. ನಮ್ಮ ಸಮಾಜ ಬಾಂಧವರಲ್ಲದೆ ಅನೇಕ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಸಂಜೆ ಗಂಟೆ 7-30ಕ್ಕೆ ಪೂಜೆಯು ನಡೆದು, ಪ್ರಸಾದವನ್ನು ವಿತರಿಸಲಾಯಿತು.

## ಪೂಜಾ ರಾವ್‌ಗೆ ಡೆಲ್ಲಿ ಸ್ಕೂಲ್ ಆಫ್ ಪ್ಲಾನಿಂಗ್ ಎಂಡ್ ಆರ್ಕಿಟೆಕ್ಚರ್‌ನ ಬ್ಯಾಚುಲರ್ ಡಿಗ್ರಿ



ಉಡುಪಿಯಲ್ಲಿ ನೆಲೆಸಿರುವ ಎಂ.ಐ.ಟಿ. ಮೂಡ್ಲಕಟ್ಟೆಯ ನಿವೃತ್ತ ಪ್ರಾಂಶುಪಾಲರಾದ ಶ್ರೀ ಎಸ್. ಎಸ್. ರಾವ್ ಹಾಗೂ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ ಶ್ರೀಮತಿ ವೇದವಲ್ಲಿ ಮೂಲ್ಕಿ ಇವರ ಪುತ್ರಿಯಾದ ಕುಮಾರಿ ಪೂಜಾ ರಾವ್ ಇವರು ನವದೆಹಲಿಯ ಪ್ರತಿಷ್ಠಿತ ಸ್ಕೂಲ್ ಆಫ್ ಪ್ಲಾನಿಂಗ್ & ಆರ್ಕಿಟೆಕ್ಚರ್‌ನ ಪದವಿ ಪಡೆದು ನಮ್ಮ ಸಮಾಜಕ್ಕೆ ಹೆಮ್ಮೆ ತಂದಿದ್ದಾರೆ. ಕಾಲೇಜಿನ 31ನೇ ಘಟಿಕೋತ್ಸವದಲ್ಲಿ ನವದೆಹಲಿಯ ಪ್ಲಾನಿಂಗ್ & ಆರ್ಕಿಟೆಕ್ಚರ್ ಕ್ಷೇತ್ರದ ಹೆಸರಾಂತ ಪ್ರೊಫೆಸರ್ ರಂಜಿತ್ ಸಬಿಖಿಯವರಿಂದ ಪದವಿ ಸ್ವೀಕರಿಸಿದ ಪೂಜಾ ರಾವ್ ಪ್ರಾಯಶಃ ಉಡುಪಿ ಜಿಲ್ಲೆಯಲ್ಲಿ ಈ ಪದವಿ ಪಡೆದ ಮೊದಲನೆಯವರಾಗಿದ್ದಾರೆ.

ಪ್ರಾಥಮಿಕ ಶಿಕ್ಷಣವನ್ನು ಭಟ್ಕಳ, ಬೆಂಗಳೂರಿನಲ್ಲೂ, ಹೈಸ್ಕೂಲು ಶಿಕ್ಷಣವನ್ನು ಇಂಡಿಯನ್ ಸ್ಕೂಲ್ ಅಲ್-ಸೀಬ್ ಮಸ್ಕತ್-ಒಮಾನ್‌ನಲ್ಲೂ, ಪದವಿಪೂರ್ವ ಶಿಕ್ಷಣವನ್ನು ಉಡುಪಿ-ಬ್ರಹ್ಮಾವರದ ಲಿಟ್ಲ್‌ರಾಕ್ ಇಂಡಿಯನ್ ಸ್ಕೂಲ್‌ನಲ್ಲೂ ಪಡೆದಿರುವ ಪೂಜಾ ರಾವ್ ಪ್ರಸ್ತುತ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸಾಯನ್ಸ್‌ನಲ್ಲಿ CISTUPನ ಪ್ರಾಜೆಕ್ಟ್ ಅಸಿಸ್ಟೆಂಟ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ GRE ಪರೀಕ್ಷೆಯಲ್ಲಿಯೂ 95% ಅಂಕಗಳನ್ನು ಗಳಿಸಿದ ಇವರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಶ್ರೀ ಸೋಮನಾಥ ದೇವಸ್ಥಾನ, ಮಂಗಲ್ಪಾಡಿ

ಕೇರಳ ರಾಜ್ಯದ ಮಂಗಲ್ಪಾಡಿ, ಚೆರುಗೋಳಿಯ ಶ್ರೀ ಸೋಮನಾಥ ದೇವಸ್ಥಾನದ ನೂತನ ಗರ್ಭಗೃಹದ ಪಾದುಕಾನ್ಯಾಸ ಕಾರ್ಯಕ್ರಮವು ಜಗದ್ಗುರು ಶಂಕರಾಚಾರ್ಯ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಪೀಠಾಧೀಶ್ವರ ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿಧಾನಂಗಳವರ ಪರಮಾನುಗ್ರಹದಿಂದ ದಿನಾಂಕ 13-07-2014 ರಂದು ಬೆಳಿಗ್ಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ನೆರವೇರಿತು. ಮುಂದಿನ ಜೀರ್ಣೋದ್ಧಾರದ ಕೆಲಸಗಳೂ ಪ್ರಗತಿಯಲ್ಲಿದ್ದು, ಸಮಾಜ ಬಾಂಧವರು ತನು-ಮನ-ಧನಗಳಿಂದ ಸಹಕರಿಸಿ, ಶ್ರೀ ದೇವರ ಸೇವೆಯಲ್ಲಿ ಭಾಗಿಗಳಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

ವರದಿ: **ಡಾ| ಚೆಂಡುಕಳ ರಮೇಶ್ ರಾವ್, ಕಲ್ಯಾಣಪುರ**

■...1ನೇ ಪುಟದಿಂದ **ಧಾರ್ಮಿಕ ಅನುಷ್ಠಾನ ಜೀವನದ ಒಂದು ಭಾಗವಾಗಬೇಕು – ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿ**

ರಾತ್ರಿಯಿಡೀ ಸಂಚರಿಸಿದ ವಾಹನ ಮಾರ್ಗಮಧ್ಯದಲ್ಲಿ ಸ್ವಲ್ಪ ಕೆಟ್ಟು ನಿಂತಿದ್ದು ನಮ್ಮ ಸಾರಥಿಗಳಿಬ್ಬರೂ ಜೊತೆಗೂಡಿ ಸರಿಪಡಿಸಿ ಪ್ರಯಾಣ ಮುಂದುವರಿಸಲಾಯಿತು. ಬಸ್ಸಿನಲ್ಲಿದ್ದ ಕೆಲವರಿಗೆ ಮಾತ್ರ ಈ ವಿಚಾರ ತಿಳಿದಿದ್ದು ಉಳಿದವರೆಲ್ಲಾ ಸುರಿಮಳೆಯ ನಡುವೆ ನಿಂತ ಬಸ್ಸಿನಲ್ಲಿ ಸುಖಾಸೀನ ಸೀಟಿನಲ್ಲಿ ನಿದ್ರಾದೇವಿಯ ಆಲಿಂಗನಕ್ಕೊಳಗಾಗಿದ್ದರು. ಅಂತೂ ನಿಗದಿಪಡಿಸಿದಂತೆ ಬೆಳಿಗ್ಗೆ 6.15ಕ್ಕೆ ಹೆಬ್ಬೂರು ತಲುಪಿದೆವು.

**ಶ್ರೀ ಮಠದ ಆತಿಥ್ಯ ಹಾಗೂ ಸ್ವಾಮೀಜಿಯವರಿಂದ ಯೋಗ ಕ್ಷೇಮ ವಿಚಾರಣೆ.**

ಬೆಳಿಗ್ಗೆ ಹೆಬ್ಬೂರಿಗೆ ತಲುಪಿದಾಗ ಮಠಕ್ಕೆ ಸುಮಾರು 1 ಕಿ.ಮೀ.ನಷ್ಟು ದೂರದಲ್ಲಿಯೇ ನಮ್ಮನ್ನು ಸ್ವಾಗತಿಸಿದ ಶ್ರೀ ಮಠದ ಆಡಳಿತಾಧಿಕಾರಿ ಶ್ರೀ ಸತ್ಯನಾರಾಯಣ ಅವರು ದಾರಿ ತೋರಿದಂತೆ ನಮ್ಮ ಬಸ್ಸು ಅವರ ಸ್ಕೂಟರನ್ನು ಹಿಂಬಾಲಿಸಿತು. ಶ್ರೀ ಮಠದ ಇಕ್ಕಟ್ಟಾದ ರಸ್ತೆಯಲ್ಲಿಯೂ ಬಸ್ಸು ತಡೆಯಿಲ್ಲದೆ ಮುಂದುವರಿದು ಛತ್ರದ ಮುಂದೆ ಬಂದು ನಿಂತಾಗ ಶ್ರೀ ಸತ್ಯನಾರಾಯಣರು ಹಾಗೂ ಮಠದ ಸಿಬ್ಬಂದಿಗಳು ಭಾವಪೂರ್ಣ ಸ್ವಾಗತ ನೀಡಿದರು. ಬೆಳಗಿನ ನಿತ್ಯವಿಧಿಗಳನ್ನು ಪೂರೈಸಿದಾಗ ಬಿಸಿ ಬಿಸಿ ಚಹಾ ಅಥವಾ ಕಾಫಿ ಸರಬರಾಜು ನಡೆಯಿತು. ಅಲ್ಲದೆ ಛತ್ರದಲ್ಲಿ ಬಿಸಿ ನೀರಿನ ವ್ಯವಸ್ಥೆ ಇದ್ದು ಸ್ನಾನಾದಿಗಳನ್ನು ಪೂರೈಸಿದಾಗ ಉಪಹಾರಕ್ಕೆ ಇಡ್ಲಿ, ಶಿರ, ಚಹಾ, ಕಾಫಿ ಸಿದ್ಧವಾಗಿತ್ತು. ಉಪಹಾರ ಸೇವಿಸಿ ಮಠದಲ್ಲಿ ಶ್ರೀಗಳ ಭೇಟಿ ಮಾಡಿದೆವು. ಶ್ರೀ ಮಾಧವಾಶ್ರಮ ಸ್ವಾಮಿಜಿಯವರು ನಮ್ಮ ಪ್ರಯಾಣದ ಬಗ್ಗೆ ವಿಚಾರಿಸಿ, ನಂತರ ಪ್ರತಿಯೊಬ್ಬರನ್ನು ಪ್ರತ್ಯೇಕವಾಗಿ ಮಾತನಾಡಿಸಿ ಪರಿಚಯ ಮಾಡಿಕೊಂಡರು.



**ಶ್ರೀ ಕಾಮಾಕ್ಷಿ ಶಾರದಾಂಬಾ ದೇವಿ ಹಾಗೂ ಶ್ರೀ ಚಿದಂಬರ ಶ್ರೀಚಕ್ರ.**

ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠದಲ್ಲಿರುವ ಶ್ರೀ ಕಾಮಾಕ್ಷಿ ಶಾರದಾಂಬಾ ದೇವಿಯು ಅಲ್ಲಿ ಪೂಜೆಗೊಳ್ಳುವ ಚಿದಂಬರ ಶ್ರೀ ಚಕ್ರದ ಮಾದರಿಯಲ್ಲಿ ನಿರ್ಮಾಣಗೊಂಡ ಶಿಲಾ ಗರ್ಭಗುಡಿಯಲ್ಲಿ ಪ್ರತಿಷ್ಠಿತಳಾಗಿ ಶ್ರೀ ಚಕ್ರ ಜೊತೆ ತ್ರಿಕಾಲ ಪೂಜೆಯನ್ನು ಸ್ವೀಕರಿಸುತ್ತಿದ್ದಾಳೆ.

ಈ ಪ್ರಪಂಚದಲ್ಲಿರುವ ಎಲ್ಲಾ ಶ್ರೀ ಚಕ್ರಗಳೂ ಕೇವಲ 2 ಆಯಾಮಗಳಿಂದ ಕೂಡಿದ್ದು ಇಲ್ಲಿರುವ ಈ ಚಿದಂಬರ ಶ್ರೀ



ಚಕ್ರ 3 ಆಯಾಮ (3D)ಗಳನ್ನು ಹೊಂದಿದ್ದು ಇಂತಹ ಶ್ರೀ ಚಕ್ರವು ಇದೊಂದೇ ಎಂದು ಇಲ್ಲಿಯ ಆಡಳಿತಾಧಿಕಾರಿಯವರು ಇತಿಹಾಸವನ್ನು ವಿವರಿಸಿದರು. ಅಂತಹ ಅಮೂಲ್ಯ ಶ್ರೀ ಚಕ್ರದ ದರ್ಶನ ಸೇವೆಗೈದು ಸಮಾಜ ಬಾಂಧವರು ಧನ್ಯತೆ ಪಡೆದರು.

**ಶ್ರೀ ಮಠಕ್ಕೆ ಹೊರೆ ಕಾಣಿಕೆ, ಶ್ರೀಗಳಿಗೆ ಪಾದ ಪೂಜೆ.**

ಉಡುಪಿ, ಪಡುಬಿದ್ರೆ, ಮಂಗಳೂರಿನ ಸಮಾಜ ಬಾಂಧವರು ಶ್ರೀ ಮಠಕ್ಕೆ ಹೊರೆ ಕಾಣಿಕೆ ಸಲ್ಲಿಸಲು ಅಕ್ಕಿ ಮೂಟೆ, ತೆಂಗಿನಕಾಯಿ, ಬಾಳೆಗೊನೆ, ಬೆಲ್ಲ, ಸಕ್ಕರೆ, ಇತರ ಸಂಬಾರ ಸಾಮಗ್ರಿಗಳೊಂದಿಗೆ ತೆರಳಿದ್ದು, ಈ ಸಾಮಗ್ರಿಗಳನ್ನು ಶ್ರೀ ಮಠಕ್ಕೆ ಒಪ್ಪಿಸಲಾಯಿತು. ನಂತರ ಸಮಾಜ ಬಾಂಧವರಿಂದ ಶ್ರೀಗಳ ಪಾದ ಪೂಜೆ ನೆರವೇರಿತು.






**ಶ್ರೀಗಳಿಂದ ಆಶೀರ್ವಚನ**

ಸುಮಾರು 11 ಗಂಟೆಗೆ ಸರಿಯಾಗಿ ಉಡುಪಿ ಮಂಗಳೂರಿನಿಂದ ಆಗಮಿಸಿದ ಭಕ್ತ ಬಾಂಧವರು ಮಠದ ಮಾಳಿಗೆಯಲ್ಲಿ ಬಂದು ಸೇರಿದರು. ಇಷ್ಟು ಹೊತ್ತಿನಲ್ಲಿ ಬೆಂಗಳೂರಿನಿಂದಲೂ ಸಮಾಜ ಬಾಂಧವರು ಬಂದು ತಲುಪಿದ್ದು ಶ್ರೀಗಳು ಮೇಲೆ ಆಗಮಿಸಿ ಎಲ್ಲರಿಗೆ ಆಶೀರ್ವಚನ (5ನೇ ಪುಟಕ್ಕೆ...)



## ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಉಡುಪಿ ಕುಕ್ಕಿಕಟ್ಟೆಯ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಯ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)** ವತಿಯಿಂದ 2014-15ನೇ ಸಾಲಿನ **ದಿ। ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ** ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಹಾಗೂ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗಾಗಿ **ದಿ। ಸಾತ್ವಿಕ್ ಶಾಸ್ತ್ರಿ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿಯೂ** ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2014. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ। ವೈ.ಸುದರ್ಶನರಾವ್, ಕೆನರಾಹೆಲ್ತ್‌ಸೆಂಟರ್, ಅಂಜುಮಾನ್ ರಸ್ತೆ, ಸಿಟಿಬಸ್ಸ್ಟಾಂಡ್ ಬಳಿ, ಉಡುಪಿ-576101**

■...4ನೇ ಪುಟದಿಂದ

ನೀಡಿದರು. ಅಲ್ಲದೆ "ಪ್ರತಿವರ್ಷ ಗುರುಪೂರ್ಣಿಮೆಯ ಮುಂದಿನ ಭಾನುವಾರ ಉಡುಪಿ, ದಕ್ಷಿಣ ಕನ್ನಡದ ಸ್ಥಾನಿಕ ಸಮಾಜದವರು ಇಲ್ಲಿಗೆ ಭೇಟಿ ನೀಡುವ ಕಾರ್ಯಕ್ರಮ ನಿಗದಿಪಡಿಸಿಕೊಳ್ಳಿರಿ" ಎಂದು ಅಪ್ಪಣೆ ಮಾಡಿದರು.

**ಋಕ್ ಸಂಹಿತಾ ಯಾಗ– ಪೂರ್ಣಾಹುತಿ**

ಶ್ರೀ ಮಠದಲ್ಲಿ ಪ್ರತೀ ವರ್ಷವೂ ನಡೆಯುವ ಕಾರ್ಯಕ್ರಮದಂತೆ, ಆಷಾಢ ಮಾಸದ ಗುರುಪೂರ್ಣಿಮೆಯಿಂದ 8 ದಿನಗಳ ಕಾಲ ಋಕ್ ಸಂಹಿತಾ ಯಾಗವು ನಡೆಯುತ್ತಿದ್ದು, ಈ



ವರ್ಷವೂ ತಾ.13.07.2014ರ ಗುರುಪೂರ್ಣಿಮೆಯಂದು ಯಾಗವು ಪ್ರಾರಂಭವಾಗಿತ್ತು. ಲೋಕ ಕಲ್ಯಾಣಕ್ಕಾಗಿ ನಡೆಸುವ ಈ ಯಾಗದಲ್ಲಿ ಬೆಂಗಳೂರು, ಮೈಸೂರಿನಿಂದ ಆಗಮಿಸಿದ್ದ ಘನ ವಿದ್ವಾಂಸರಾದ ಋತ್ವಿಜರು ಪುರೋಹಿತರಾಗಿ ಆಗಮಿಸಿದ್ದು, ದಿನಾಂಕ 20ರಂದು ಯಾಗದ ಪೂರ್ಣಾಹುತಿ ನೆರವೇರಿತು. ಶ್ರೀ ಮಠದಲ್ಲಿ ಹಿಂದಿನ ಪೀಠಾಧಿಪತಿಗಳು ಗತಿಸಿದ ನಂತರ ಹಲವು ವರ್ಷಗಳ ನಂತರ ಈಗಿನ ನೂತನ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳ ಸಮ್ಮುಖದಲ್ಲಿ ಈ ಯಾಗ ಸಂಪನ್ನಗೊಂಡಿದ್ದರಿಂದ ಅಲ್ಲಿನ ಭಕ್ತರು, ಶ್ರೀ ದೇವಳದ ಟ್ರಸ್ಟಿಗಳು ಬಹುಮುಳಕಿತರಾಗಿದ್ದಂತೆ ಅವರ ಮಾತಿನಲ್ಲಿ ತಿಳಿದು ಬಂತು. ಶ್ರೀಗಳು ಯಾಗ ಸಂಪನ್ನಗೊಳ್ಳುವ ಸಂದರ್ಭದಲ್ಲಿ ಎಲ್ಲ ಭಕ್ತ ಬಾಂಧವರನ್ನು ಉದ್ದೇಶಿಸಿ ಮಾತಾಡಿ "ಈ ಯಾಗದ ಸಂಪನ್ನತೆಯಿಂದ ಲೋಕ ಕಲ್ಯಾಣವಾಗುವುದಲ್ಲದೇ ಇದನ್ನು ನೋಡುವುದೇ ಒಂದು ಭಾಗ್ಯ ವಿಶೇಷ, ಈ ಮೂಲಕ ನಮ್ಮ ಜನರಲ್ಲಿ–ಭಕ್ತರಲ್ಲಿ ಧಾರ್ಮಿಕ ಭಾವನೆಗಳು ಉದ್ದೀಪನಗೊಳ್ಳಲಿ ಎಂದು ಶುಭ ಕೋರಿದರು".



ನಂತರ ಯಾಗ ಪೂರ್ಣಾಹುತಿಗೊಂಡು ಶ್ರೀಗಳಿಂದ ಎಲ್ಲರಿಗೂ ತೀರ್ಥ ಪ್ರಸಾದ ಹಾಗೂ ಮಂತ್ರಾಕ್ಷತೆ ವಿತರಣೆಯಾಯಿತು.

**ಸನ್ಮಾನ**

ಋಕ್ ಸಂಹಿತಾ ಯಾಗದ ಪೂರ್ಣಾಹುತಿಯ ನಂತರ ಯಾಗ ಪೌರೋಹಿತ್ಯ ನಡೆಸಿದ ಋತ್ವಿಜರಿಗೆ ಶ್ರೀ ಮಠದ ವತಿಯಿಂದ ಗೌರವಾರ್ಪಣೆ ನೆರವೇರಿತು. ಇದರೊಂದಿಗೆ ನಮ್ಮ ಸಮಾಜದ ವಿದ್ವಾಂಸರಾದ ವೇದಮೂರ್ತಿ ಪಾವಂಜೆ ಭವಾನಿಶಂಕರ ಉಪಾಧ್ಯಾಯ ಹಾಗೂ ಉಡುಪಿ ದಕ್ಷಿಣ ಕನ್ನಡದ ನಮ್ಮ ಸಮಾಜದ ಹಲವು ದೇವಳಗಳ ಜೀರ್ಣೋದ್ಧಾರದ ರೂವಾರಿ ಶ್ರೀ ಕರುಣ್ ರಾವ್ ಬೆಳ್ಳೆಯವರನ್ನು ಶಾಲು, ಫಲ ಮಂತ್ರಾಕ್ಷತೆಯೊಂದಿಗೆ ಸನ್ಮಾನಿಸಲಾಯಿತು.



**ಬ್ರಾಹ್ಮಣ ಸುಹಾಸಿನಿ ಆರಾಧನೆ**

ನಂತರ ಮಾಳಿಗೆಯಲ್ಲಿ ಶ್ರೀ ಮಠದ ಮೆನೇಜರ್ ಶ್ರೀ ಸುಬ್ರಹ್ಮಣ್ಯರಾಯರ ಮೇಲುಸ್ತುವಾರಿಯಲ್ಲಿ ಬ್ರಾಹ್ಮಣ ಸುಹಾಸಿನಿ ಆರಾಧನೆ ನೆರವೇರಿತು. ಸ್ಥಾನಿಕ ಸಮಾಜದ ಭಕ್ತ ಬಾಂಧವರು ಬರುವರೆಂದು ನಿಶ್ಚಯವಾದಂತೆ ಪುತ್ತೂರಿನಿಂದ ಅಡುಗೆಯವರನ್ನು ಕರೆಸಿ ನಮ್ಮ ದಕ್ಷಿಣ ಕನ್ನಡಿಗರ ಊಟವನ್ನೇ ಯಥೇಷ್ಟ ಬಡಿಸಲಾಯಿತು.

**ನಿರ್ಗಮನ**

ಸುಮಾರು 2.30ಕ್ಕೆ ಶ್ರೀ ಶ್ರೀಗಳಿಂದ ಅಪ್ಪಣೆ ಪಡೆದು ಮತ್ತೆ ಮರು ಪ್ರಯಾಣ ಪ್ರಾರಂಭ. ರಾತ್ರಿ 10.30ರ ಒಳಗೆ ಉಡುಪಿಗೆ ಸೇರಬೇಕೆಂಬ ತವಕದಲ್ಲಿ ಪ್ರಯಾಣ ಪ್ರಾರಂಭಿಸಿದರೂ ದಾರಿ ಮಧ್ಯೆ ಒಮ್ಮೆ ಚಹಾ ವಿರಾಮದ ನಂತರ ಘಾಟಿ ರಸ್ತೆ ಇಳಿದು ರಾತ್ರಿ ಊಟ ಉಪ್ಪಿನಂಗಡಿ ಅಥವಾ ಮಂಗಳೂರಿನಲ್ಲಿ ಮಾಡುವುದೆಂದು ಯೋಚಿಸಿದರೂ ಅಷ್ಟು ತಡವಾಗುವುದರಿಂದ ಒಳ್ಳೆ ಊಟ ಸಿಗಲಾರದೆಂದು ತಿಳಿದು ಸಕಲೇಶಪುರದಲ್ಲಿಯೇ ಸುಮಾರು 5.30ರ ಹೊತ್ತಿಗೆ ಚಹಾ ತಿಂಡಿ ಪೂರೈಕೆಗಾಗಿ ನಮ್ಮ ಬಸ್ಸನ್ನು ನಿಲ್ಲಿಸಲಾಯಿತು. ರಾತ್ರಿಯ ಊಟ ಇರುವುದಿಲ್ಲವೆಂಬ ಸೂಚನೆಯಂತೆ ಸಂಜೆಯ ಉಪಹಾರ ಸ್ವಲ್ಪ ಬಿಗುವಾಗಿಯೇ ನೆರವೇರಿತು. ಅಂತೂ 6.30ಕ್ಕೆ ಮತ್ತೆ ಪ್ರಯಾಣ ಪ್ರಾರಂಭಿಸಿ 10.30ಕ್ಕೆ ಮಂಗಳೂರಿಗೆ ಬಂದೆವು. ಮಂಗಳೂರಿನಲ್ಲಿ, ಪಡುಬಿದ್ರೆಯಲ್ಲಿ ಇಳಿಯುವವರನ್ನು ಇಳಿಸಿ ಉಡುಪಿಗೆ ಬಂದಾಗ ರಾತ್ರಿ 12.30 ಆಗಿತ್ತು.



ಒಟ್ಟಿನಲ್ಲಿ ಹೆಬ್ಬೂರು ಶ್ರೀ ಘನಪುರಿ ಸಂಸ್ಥಾನದ ಕೋದಂಡಾಶ್ರಮ ಮಠಕ್ಕೆ ಹೋದ ನಮ್ಮ ಧಾರ್ಮಿಕ ಪ್ರವಾಸವು ಯಶಸ್ವಿಯಾಗುವುದರೊಂದಿಗೆ ಹೋಗಿ ಬಂದ ಎಲ್ಲರ ಮನದಲ್ಲಿ ಧನ್ಯತೆಯ ಭಾವನೆ ಉಳಿಯುವಂತಾಯಿತು.

## ಸಿಂಹ ಮಾಸದ ವಿಶೇಷ ದಿನಗಳು

| | |
|---|---|
| 16-08-2014 | ಸಿಂಹ ಸಂಕ್ರಮಣ, ಮಘಾ ನಕ್ಷತ್ರಾರಂಭ |
| 17-08-2014 | ಶ್ರೀ ಕೃಷ್ಣಾಷ್ಟಮಿ |
| 21-08-2014 | ಸರ್ವೈಕಾದಶೀ |
| 22-08-2014 | ಪ್ರದೋಷಃ |
| 25-08-2014 | ಅಮವಾಸ್ಯಾ |
| 28-08-2014 | ಗೌರೀ ತೃತೀಯಾ |
| 29-08-2014 | ಶ್ರೀ ಗಣೇಶ ಚತುರ್ಥೀ |
| 30-08-2014 | ಹುಬ್ಬಾ ನಕ್ಷತ್ರಾರಂಭ |
| 05-09-2014 | ಸರ್ವೈಕಾದಶೀ |
| 06-09-2014 | ಪ್ರದೋಷಃ |
| 07-09-2014 | ಸರ್ವ ಋಗುಪಾಕರ್ಮ |
| 08-09-2014 | ಅನಂತ ಚತುರ್ದಶಿ |
| 09-09-2014 | ಪೂರ್ಣಿಮಾ, ಮಹಾಲಯಾರಂಭ |
| 12-09-2014 | ಸಂಕಷ್ಟ ಚತುರ್ಥಿ ಚಂದ್ರೋದಯ ರಾತ್ರಿ-9.21ಕ್ಕೆ |
| 13-09-2014 | ಉತ್ತರಾ ನಕ್ಷತ್ರಾರಂಭ |
| 16-09-2014 | ಕನ್ಯಾ ಸಂಕ್ರಮಣ. |

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

**ಈ ತಿಂಗಳ ಕಾರ್ಯಕ್ರಮಗಳು**

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ | : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.12-09-2014) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.15-08-2014, 13-09-2014 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.04-09-2014 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಭರತನಾಟ್ಯ-ಗುರುವಂದನಾ ಕಾರ್ಯಕ್ರಮ

ಕು। ಅನನ್ಯ ರಾವ್ ಕೇದಿಗೆ ಇವರ ಭರತನಾಟ್ಯ, ಗುರುವಂದನಾ ಕಾರ್ಯಕ್ರಮವು ಮಂಗಳೂರಿನಲ್ಲಿ ಯಶಸ್ವಿಯಾಗಿ ನೆರವೇರಿತು. ಮಂಗಳೂರಿನ ಡಾ। ಕೇದಿಗೆ ಅರವಿಂದರಾವ್ ಹಾಗೂ ಗಾಯತ್ರಿ ರಾವ್ ದಂಪತಿಗಳ ದ್ವಿತೀಯ ಪುತ್ರಿಯಾದ ಕು। ಅನನ್ಯ ರಾವ್ ಕೇದಿಗೆ ಮಂಗಳೂರಿನ ಪ್ರತಿಷ್ಠಿತ ಸನಾತನ ನಾಟ್ಯಾಲಯದ ನೃತ್ಯ ಗುರು ವಿದುಷಿ ಶಾರದ ಮಣಿಶೇಖರ್ ಇವರ ಶಿಷ್ಯೆ.

# ವೈದ್ಯಕೀಯ ವೇದಿಕೆ–ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಆರೋಗ್ಯ ಮತ್ತು ಕುಡಿಯುವ ನೀರು (ಹಿಂದಿನ ಸಂಚಿಕೆಯಿಂದ)**

ನಗರಗಳಲ್ಲಿ ನಳ್ಳಿಗಳಲ್ಲಿ ಸರಬರಾಜು ಮಾಡುವ ನೀರನ್ನು ದೊಡ್ಡಮಟ್ಟದಲ್ಲಿ ಶುದ್ಧೀಕರಣ ಸ್ಥಾವರಗಳಲ್ಲಿ ಶುದ್ಧೀಕರಿಸಿ ಸರಬರಾಜು ಮಾಡುತ್ತಾರೆ. ಹೀಗೆ ಸರಬರಾಜು ಮಾಡುವ ನೀರು ಬಾವಿಯ ನೀರಿಗಿಂತಲೂ ಶುದ್ಧ ಎಂದು ಹೇಳುತ್ತಾರೆ. ಆದರೆ ನಮ್ಮ ದೇಶದಲ್ಲಿ ಇದರ ವಾಸ್ತವತೆಯನ್ನು ಪರಿಶೀಲಿಸಿಯೆ ನಂಬಬೇಕು. ಬಾವಿಯ ನೀರನ್ನು ಕಾಲಕಾಲಕ್ಕೆ ಬ್ಲೀಚಿಂಗ್ ಪೌಡರ್ ಬಳಸಿ ಕ್ಲೋರಿನೇಶನ್ ಮಾಡಿ ಶುದ್ಧೀಕರಿಸಬಹುದು. ಅಂದಾಜು 9 ಅಡಿ ಅಗಲದ ಬಾವಿಯಲ್ಲಿರುವ ಪ್ರತಿ ಒಂದು ಮೀಟರ್ ಆಳಕ್ಕಿರುವ ನೀರಿಗೆ ಸುಮಾರು 15 ಬ್ಲೀಚಿಂಗ್ ಪೌಡರ್‌ನಂತೆ ಅದನ್ನು ಒಂದು ಬಕೆಟು ನೀರಿನಲ್ಲಿ ಕರಗಿಸಿ ಬಾವಿಗೆ ಸುರಿದು ದ್ರಾವಣವು ಬಾವಿಯ ನೀರಿನೊಂದಿಗೆ ಎಲ್ಲಾ ಆಳದಲ್ಲಿಯೂ ಸಮಪ್ರಮಾಣದಲ್ಲಿ ಮಿಳಿತವಾಗುವಂತೆ ಕುಲುಕಬೇಕು. ಒಂದು ಗಂಟೆಯ ನಂತರ ಈ ನೀರನ್ನು ಬಳಸಬಹುದು. ದಿನನಿತ್ಯ ಬಳಸುವ ನೀರಿನ ಪ್ರಮಾಣ ಗಮನದಲ್ಲಿಟ್ಟುಕೊಂಡು ಬಾವಿಗೆ ಹೊಸ ನೀರು ಬಂದಂತೆ (ಅಂದಾಜು ತಿಂಗಳಿಗೊಮ್ಮೆ) ಕ್ಲೋರಿನೇಶನ್ ಮಾಡಬೇಕು

ನೀರು ಯಾವುದೇ ಮೂಲದ್ದಾಗಲಿ ನಮಗರಿವಿಲ್ಲದೆ ಕಲುಷಿತಗೊಳ್ಳುವ ಸಾಧ್ಯತೆಯಿರುವುದರಿಂದ ಮನೆಯಲ್ಲಿ ನೀರನ್ನು ಪುನಃಶುದ್ಧೀಕರಿಸಿಯೇ ಬಳಸಬೇಕು. ಮನೆಯಲ್ಲಿ ನೀರನ್ನು ಶುದ್ಧೀಕರಿಸುವ ಅತ್ಯಂತ ಸುಲಭ ಉಪಾಯವೆಂದರೆ ನೀರನ್ನು ಸೋಸಿ, ಕುದಿಸಿ ಉಪಯೋಗಿಸುವುದು. ಆದರೆ ನೀರನ್ನು ಕುದಿಸಿದರೆ ಅದರ ರುಚಿಯಲ್ಲಿ ಬದಲಾವಣೆಯಾಗುತ್ತದೆ. ಹಾಗೂ ಕುದಿಸಲು ಇಂಧನ ಹಾಗೂ ಶ್ರಮ,ಸಮಯದ ಅವಶ್ಯಕತೆ ಇದೆ. ಹಾಗಾಗಿ ಎಲ್ಲರೂ ಕುದಿಸಿದ ನೀರನ್ನು ಬಳಸಲು ಇಷ್ಟಪಡುವುದಿಲ್ಲ. ಆದುದರಿಂದ ಮನೆಯಲ್ಲಿ ನೀರನ್ನು ಶುದ್ಧೀಕರಿಸುವ ಇನ್ನೊಂದು ಸುಲಭ ಹಾಗೂ ಉತ್ತಮ ಉಪಾಯವೆಂದರೆ ಅಲ್ಟ್ರಾವಯೋಲೆಟ್ ಕಿರಣಗಳಿಂದ ನೀರನ್ನು ಶುದ್ಧೀಕರಿಸುವ ಉಪಕರಣ(Aquaguard)ವನ್ನು ಮನೆಯಲ್ಲಿ ಅಳವಡಿಸುವುದು. ಇದು ದುಭಾರಿಯೆನಿದರೆ (ಸುಮಾರು ಹದಿನೈದು ಸಾವಿರ ರೂಪಾಯಿಗಳು) ಪಾತ್ರೆ ಅಂಗಡಿಗಳಲ್ಲಿ ಸುಮಾರು ಒಂದು ಸಾವಿರ ರೂಪಾಯಿಗಳಿಗೆ ಸಿಗುವ ಕ್ಯಾಂಡಲ್ ಫಿಲ್ಟರ್ ಉಪಕರಣವನ್ನು ಬಳಸಬಹುದು.

ಮನೆಯಲ್ಲಿ ಶುದ್ಧೀಕರಿಸಿದ ನೀರು ಕೂಡಾ ಉಪಯೋಗಿಸುವ ಹಂತದಲ್ಲಿ ಕಲುಷಿತಗೊಳ್ಳುವ ಸಾಧ್ಯತೆ ಇರುತ್ತದೆ. ಮನೆಯಲ್ಲಿ ನೀರನ್ನು ಸಂಗ್ರಹಿಸಿಡುವ ಪಾತ್ರೆಗೆ ಮುಚ್ಚಳವಿರಬೇಕು ಹಾಗೂ ನಳ್ಳಿಯ ಮುಖಾಂತರ ನೀರನ್ನು ತೆಗೆಯುವ ವ್ಯವಸ್ಥೆ ಅದರಲ್ಲಿರಬೇಕು. ಯಾರೂ ನೇರವಾಗಿ ನೀರಿನ ಪಾತ್ರೆಗೆ ಕೈ ಅಥವಾ ಗ್ಲಾಸು ಮುಳುಗಿಸಿ ನೀರು ತೆಗೆಯಕೂಡದು. ನಮ್ಮ ಉಗುರಿನ ಎಡೆಯಲ್ಲಿರುವ ಮೀಣ ಜೀವಿಗಳು (ಉದಾ: ಮನೆಯಲ್ಲಿ ಯಾರಾದರೂ ಭೇದಿ, ಅಮೀಬಿಯಾಸಿಸ್, ಹೊಟ್ಟೆಹುಳದಿಂದ ನರಳುತ್ತಿದ್ದರೆ, ಗಮನಿಸಿರಿ, ಅವರಿಗೆ ಕೆಲವೊಮ್ಮೆ ಖಾಯಿಲೆಯ ಚಿಹ್ನೆಗಳಿರುವುದಿಲ್ಲ) ಕೈ ಮುಳುಗಿಸಿದಾಗ ನೀರಿಗೆ ಸೇರಿಕೊಳ್ಳುವ ಸಾಧ್ಯತೆಯನ್ನು ತಡೆಯಲು ಈ ಶಿಸ್ತು ಅಗತ್ಯ.

ನೀರಿನಲ್ಲಿರುವ ರಾಸಾಯನಿಕಗಳನ್ನು ಸುಲಭದಲ್ಲಿ ಪತ್ತೆ ಹಚ್ಚಲಾಗದು. ಸಂಶಯವಿದ್ದಾಗ ಅದಕ್ಕಾಗಿಯೇ ಮೀಸಲಾಗಿರುವ ಕೆಲವು ಲಾಬೋರೇಟರಿಗಳಿಗೆ ನೀರಿನ ಮಾದರಿ ಕಳುಹಿಸಿ ಪರೀಕ್ಷಿಸಬಹುದು. ನೀರಿನ ಬಣ್ಣ, ರುಚಿ ಹಾಗೂ ವಾಸನೆಯಿಂದ ರಾಸಾಯನಿಕಗಳು ನೀರಿನಲ್ಲಿರುವ ಬಗ್ಗೆ ಅನುಮಾನ ಪಡಬಹುದು. ಆರ್ಸೆನಿಕ್, ಕ್ಯಾಡ್ಮಿಯಂ, ಸಯನೈಡ್, ಸೀಸ, ಪಾದರಸ, ಸೆಲೆನಿಯಂ ಇವು ಸಾಮಾನ್ಯವಾಗಿ ನೀರಿನಲ್ಲಿ ಪತ್ತೆಯಾಗುವ ರಾಸಾಯನಿಕಗಳು. ನಾವು ಉಪಯೋಗಿಸುವ ರಾಸಾಯನಿಕಗಳು ನೀರನ್ನು ಸೇರದಂತೆ ಎಚ್ಚರವಹಿಸಬೇಕೇ ವಿನಹ ನೀರಿನಲ್ಲಿರುವ ರಾಸಾಯನಿಕಗಳನ್ನು ಮನೆಯಲ್ಲಿ ಶುದ್ಧೀಕರಿಸುವುದು ಸಾಧ್ಯವಿಲ್ಲ.

ನೈಸರ್ಗಿಕವಾಗಿ ಕೆಲವು ನೀರಿನಲ್ಲಿ ಕ್ಯಾಲ್ಸಿಯಂ ಹಾಗೂ ಮೆಗ್ನೇಸಿಯಂನ ಲವಣಗಳು ಹೆಚ್ಚಿರುತ್ತದೆ ಅಥವಾ ತುಂಬಾ ಕಡಿಮೆ ಇರುತ್ತದೆ. ಹೆಚ್ಚಿದ್ದರೆ ಅದನ್ನು ಗಡಸುನೀರು ಎಂದೂ ಕಡಿಮೆ ಇದ್ದರೆ ಅದನ್ನು ಮೆದುನೀರು ಎಂದೂ ಕರೆಯುತ್ತಾರೆ. ಗಡಸು ನೀರಿನಲ್ಲಿ ಸೋಪು ಬಳಸಿದಾಗ ನೊರೆ ಬರುವುದಿಲ್ಲ ಹಾಗೂ ಪಾತ್ರೆಗಳು ಬೇಗನೆ ಹಾಳಾಗುತ್ತವೆ. ಬೋರ್ವೆಲ್ಲಿನ ನೀರು ಸಾಮಾನ್ಯವಾಗಿ ಗಡಸು ನೀರಾಗಿರುತ್ತದೆ. ಗಡಸು ನೀರಿಗೆ ಸ್ವಾದ ಕಡಿಮೆ. ಗಡಸು ನೀರಿನಿಂದ ಆರೋಗ್ಯಕ್ಕೆ ಯಾವುದೇ ಅಪಾಯವಿಲ್ಲ. ಆದರೆ ಮೆದುನೀರು ಬಳಸುವವರಿಗೆ ಹೃದ್ರೋಗ ಬರುವ ಸಾಧ್ಯತೆ ಹೆಚ್ಚಿರುವುದನ್ನು ಗಮನಿಸಲಾಗಿದೆ.

ಕೊನೆಯದಾಗಿ ನೀರಿನಲ್ಲಿ ಕರಗಿರುವ ಫ್ಲೋರೈಡ್ ಎಂಬ ಲವಣವು ನಮ್ಮ ಹಲ್ಲುಗಳ ಹಾಗೂ ಎಲುಬುಗಳ ಬೆಳವಣಿಗೆಗೆ ಅಗತ್ಯ. ನೀರಿನಲ್ಲಿ ಫ್ಲೋರೈಡ್ ಕಡಿಮೆ ಇದ್ದರೆ ಹಲ್ಲು ಹಾಗೂ ಎಲುಬಿನ ಬೆಳವಣಿಗೆ ಕುಂಟಿತವಾಗುತ್ತದೆ. ಹಲ್ಲುಗಳಲ್ಲಿ ಕುಳಿಬೀಳುವುದು ಸಾಮಾನ್ಯ. ಹಾಗೆಯೇ ಫ್ಲೋರೈಡ್ ಹೆಚ್ಚಿಗೆ ಇದ್ದರೂ ಹಲ್ಲುಗಳು ಹಾಳಾಗುತ್ತವೆ. ಕೆಲವು ಪ್ರದೇಶಗಳಲ್ಲಿ ಮಾತ್ರ ಫ್ಲೋರೈಡ್ ಹೆಚ್ಚಿಗೆ ಹಾಗೂ ಕಡಿಮೆ ಇರುವ ನೀರು ಇರುವುದರಿಂದ ಎಲ್ಲರೂ ಈ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ. ಅಂತಹಾ ಪ್ರದೇಶಗಳಲ್ಲಿ ಸ್ಥಳೀಯಾಡಳಿತ ಸಂಸ್ಥೆಗಳೇ ಫ್ಲೋರೈಡ್ ಸರಿಪ್ರಮಾಣದಲ್ಲಿರುವ ನೀರನ್ನು ಪೂರೈಸುವ ಕ್ರಮ ಕೈಗೊಳ್ಳಬೇಕು. ನೀರಿನಲ್ಲಿನ ಫ್ಲೋರೈಡ್‌ನ ಅಂಶವನ್ನು ಸರಿಪ್ರಮಾಣಕ್ಕೆ ತರುವ, ಮನೆಯಲ್ಲಿ ಬಳಸಬಹುದಾದ ಉಪಕರಣಗಳೂ ಲಭ್ಯವಿವೆ.

(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು)

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**

# ಶಿಕ್ಷಣ ಇಲಾಖೆಯ ಯಡವಟ್ಟು–ಕು। ಪ್ರೇರಣಾ ರ್‍ಯಾಂಕ್ ಪಟ್ಟಿಯಲ್ಲಿ



ಈ ಬಾರಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮೈಸೂರಿನ ಮರಿಮಲ್ಲಪ್ಪ ಪ್ರೌಢ ಶಾಲೆಯ ವಿದ್ಯಾರ್ಥಿನಿ ಕುಮಾರಿ ಪ್ರೇರಣಾ ರಾವ್ 625 ಅಂಕಗಳಲ್ಲಿ 619 ಗಳಿಸಿ ಉನ್ನತ ಸಾಧನೆ ಮಾಡಿರುತ್ತಾರೆ. ಪ್ರಥಮ ಫಲಿತಾಂಶದಲ್ಲಿ ನಿರೀಕ್ಷಿತ ಅಂಕಗಳು ಲಭಿಸದ ಕಾರಣ ಇಂಗ್ಲೀಷ್ ಹಾಗೂ ವಿಜ್ಞಾನ ವಿಷಯಗಳಲ್ಲಿ ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದ್ದು ಇದೀಗ ಮರು ಮೌಲ್ಯಮಾಪನದಲ್ಲಿ ಇಂಗ್ಲೀಷ್‌ನಲ್ಲಿ 16 ಹಾಗೂ ವಿಜ್ಞಾನದಲ್ಲಿ 1 ಅಂಕಗಳು ಹೆಚ್ಚುವರಿಯಾಗಿ (ಒಟ್ಟು 17 ಅಂಕಗಳು) ಲಭಿಸಿರುತ್ತದೆ.

2013–14ರಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ ಸ್ಥಾನಿಯು 622 ಅಂಕಗಳನ್ನು ಗಳಿಸಿದ್ದು ಪ್ರೇರಣಾಳು ಕೇವಲ 3 ಅಂಕಗಳಿಂದ ಮಾತ್ರ ಹಿಂದಿದ್ದು ರಾಜ್ಯದ ಉನ್ನತ 10 ಸ್ಥಾನಿಗಳಲ್ಲಿ ಒಬ್ಬಳಾಗಿದ್ದಾಳೆ. ಶಿಕ್ಷಣ ಇಲಾಖೆಯ ಇಂತಹ ಯಡವಟ್ಟಿನಿಂದಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ರ್‍ಯಾಂಕ್ ಪಟ್ಟಿಯಲ್ಲಿ ವ್ಯತ್ಯಾಸ, ಮಾನಸಿಕ ಅಳಲು ಉಂಟಾಗುವುದೆಂಬುವುದಕ್ಕೆ ಇದು ನಿದರ್ಶನವಾಗಿದೆ.

ಕುಮಾರಿ ಪ್ರೇರಣಾಳು ನಮ್ಮ ಸಮಾಜದ ಮೈಸೂರು ಸಂಘದಲ್ಲಿ ಸಕ್ರಿಯ ಸದಸ್ಯ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಎಮ್. ಆರ್. ಜಗದೀಶ್ ರಾವ್ ಮತ್ತು ಶ್ರೀಮತಿ ಗಾಯತ್ರಿ ದಂಪತಿಗಳ ಪುತ್ರಿ ಹಾಗೂ ಮಂಗಳೂರಿನ ಶ್ರೀ ಎಮ್. ರಘುರಾಮ ಶರ್ಮ ಮತ್ತು ಶ್ರೀಮತಿ ರಾಧಾ ದಂಪತಿಗಳ ಪೌತ್ರಿಯಗಿದ್ದು ಪ್ರೇರಣಾಳ ಈ ಸಾಧನೆಯಿಂದ ನಮ್ಮ ಸಮಾಜವು ಹೆಮ್ಮೆ ಪಡುವಂತಾಗಿದೆ.

# ಸಂಸ್ಕಾರಗಳಿಂದ ಸಂಸಾರ

–ರಾಮಮೂರ್ತಿ ಶಾಸ್ತ್ರೀ, ಬೆಂಗಳೂರು.

'ಸಂಸಾರ'ವೆಂಬ ಈ ಮೂರಕ್ಷರದ ಮಹಿಮೆಯನ್ನು ಅರಿಯದವರು ಲೋಕದಲ್ಲಿ ವಿರಳ. ಇಲ್ಲಿ ಸಂ–ಎಂದರೆ ಉತ್ತಮವಾದ ಮತು ಸಾರ ಎಂದರೆ ಸ್ವತ್ತು ಎಂದರ್ಥ. ಎಂದರೆ ಉತ್ತಮವಾದ ಸಾರವಿರುವುದೇ 'ಸಂಸಾರ'ವೆಂದಾಗುತ್ತೆದೆ.

ಭೂಮಿಯನ್ನು ಸಂಸ್ಕರಿಸಿ, ಸಂಸ್ಕರಿಸಿದ ಬೀಜಗಳನ್ನು ಬಿತ್ತಿದಾಗ ಮಾತ್ರ ಸಾರಯುಕ್ತ ಫಲ ಪಡೆಯುವಂತೆಯೇ, ಸಂಸಾರಿಗಳಿಗೆ ಸಂಸ್ಕಾರಗಳನ್ನು ನೀಡಿದಾಗ ಮಾತ್ರ ಸಂಸಾರ ಸರಾಗವಾಗುತದೆ. ಈ ಕಾರಣಕ್ಕಾಗಿಯೇ ನಮ್ಮ ಋಷಿವರೇಣ್ಯರು ಮತ್ತು ಶಾಸ್ತ್ರಜ್ಞರು 48 ಸಂಸ್ಕಾರಗಳನ್ನು ವಿಧಿಸಿದ್ದರು. ಆದರೆ ರೂಢಿಯಲ್ಲಿ ಈಗ 16 ಸಂಸ್ಕಾರಗಳನ್ನು ಮಾತ್ರ ನೆರವೇರಿಸುತ್ತಿದ್ದಾರೆ. ಅದರಲ್ಲೂ ಈ ನವ ನಾಗರೀಕತೆಯಲ್ಲಿ ಕೇವಲ ಕೆಲವೇ ಸಂಸ್ಕಾರಗಳು ಆಡಂಬರದಿಂದ ನಡೆಯುವುದನ್ನು ನೋಡುತ್ತೇವೆ.

ಗರ್ಭಾದಾನ , ಪುಂಸವನ, ವಿಷ್ಣುಬಲಿ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೌಲ, ಉಪನಯನ, ಮಹಾನಾಮ್ನೀ, ಮಹಾವ್ರತ, ಉಪನಿಷದ್ವ್ರತ, ಗೋದಾನವ್ರತ, ಸಮಾವರ್ತನ, ಮತು ವಿವಾಹ. ಈ ಪ್ರತಿಯೊಂದು ಸಂಸ್ಕಾರಗಳಿಗೂ ವಿಶೇಷ ತತ್ವ, ನಿಯಮ, ಮತು ಮಹಿಮಾತಿಶೆಯಗಳಿರುತವೆ.

ಸಕಾಲದಲ್ಲಿ ನೀಡುವ ಈ ಸಂಸ್ಕಾರಗಳಿಂದ ಸಂಸಾರದಲ್ಲಿನ ವ್ಯಕ್ತಿಯು ಬಾಹ್ಯಾಂತರ ಶುಚಿಯಾಗಿ ಅವನ ವ್ಯಕಿತ್ವ ವಿಕಸನವಾಗಿ ಸಂಸಾರವು ತಲೆ ಎತ್ತಿ ನಿಲ್ಲುವಂತಾಗುತದೆ. ಇಂತಹ ಸಂಸ್ಕಾರಗಳಿಂದ ದೇಶವು ಉನ್ನತಿಯ ಶಿಖರವೇರುತದೆ. ಈ ಕಾರಣಕ್ಕಾಗಿಯೇ ಸಂಸ್ಕಾರಗಳು ಅನಿವಾರ್ಯವೆನಿಸುತ್ತದೆ. ಇದನ್ನೆಲ್ಲ ಅರಿತು ಸಂಸ್ಕಾರ ನೀಡುವ, ನಡೆಸುವ ಕಾರ್ಯ ಸಮಾಜದ ಮೇಲಿದೆ.

**ವಿಳಾಸ ಬದಲಾವಣೆ**

**K. MOHAN RAO**

"Sri Krishna", Krishna Rao Compound, Karamballi, Near Doddannagudde,
Kunjibettu Post, Udupi - 576 102.


Krishna Rao

Ph : 2520652
Mob. : 9902029048



KISHAN

Studio & Video



Indoor Photography & Port Folio Photography,
Video & Mixing, Lamination

MAIN ROAD, MAJOOR & BANTAKAL.

**Buying and selling shares as easy as checking your emails**

**Sharekhan Online Trading Account Features:**

- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

**Contact : Pradeep Rao K.**
**Tel : 0824 2412903, 9448191028**
**Navadurga Share Services**
**Email : navdurga@bp.sharekhan.com**

Sharekhan
YOUR GUIDE TO THE FINANCIAL JUNGLE

Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142): for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122:NSE: INS23106924)

ಪ್ರೊ : ಸುಧಾಕರ್ ರಾವ್ ಬೆಳ್ಳೆ



ಶ್ರೀಮಾತಾ ಇಲೆಕ್ಟ್ರಾನಿಕ್ಸ್

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ
ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.) ಮಂಗಳೂರು

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ 77 ನೇ ವಾರ್ಷಿಕ ಮಹಾಸಭೆಯು ದಿನಾಂಕ 27-07-2014 ರಂದು ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಭವನದಲ್ಲಿ ಜರುಗಿತು.

2013-14 ರಲ್ಲಿ ಸಂಘವು ರೂ. 17 ಕೋಟಿ ದಾಖಲೆ ಠೇವಣಿ ಸಂಗ್ರಹಿಸಿದ್ದು ರೂ.13 ಕೋಟಿಗೂ ಮಿಕ್ಕಿ ಸದಸ್ಯರಿಗೆ ಸಾಲದ ಸೌಲಭ್ಯಗಳನ್ನು ಒದಗಿಸಿದೆ. 2014-15 ಸಾಲಿನಲ್ಲಿ ರೂ.27 ಕೋಟಿಗಳ ಠೇವಣಿ ಹಾಗೂ ರೂ.25 ಕೋಟಿಗಳ ಸಾಲ ವಿತರಿಸಿರುವ ಗುರಿ ಹೊಂದಿದೆ ಮತ್ತು ರೂ.30 ಲಕ್ಷಗಳ ಲಾಭಗಳಿಸುವ ಉದ್ದೇಶ ಹೊಂದಿದೆ.

ಸಂಘದ ಸರ್ವತೋಮುಖ ಬೆಳವಣಿಗೆಗೆ ಸದಸ್ಯರ ಸಹಕಾರವನ್ನು ಬಯಸುತ್ತಾ ಸಂಘದ ಏಳಿಗೆಗೆ ಕಾರಣರಾದ ಎಲ್ಲರಿಗೂ ಸಂಘದ ಪರವಾಗಿ ಅಧ್ಯಕ್ಷರು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು.

ಆರ್ಥಿಕ ವರ್ಷದಲ್ಲಿ ಸಂಘವು ರೂ.19.47 ಲಕ್ಷ ನಿವ್ವಳ ಲಾಭಗಳಿಸಿದ್ದು, ಸರ್ವಸದಸ್ಯರ ಅನುಮೋದನೆಯೊಂದಿಗೆ, ಸದಸ್ಯರಿಗೆ ಶೇ.13ರಂತೆ ಲಾಭಾಂಶವನ್ನು ವಿತರಿಸಲು ನಿರ್ಧರಿಸಲಾಯಿತು.

ಸಂಘವು ಈಗಾಗಲೇ ಪುತ್ತೂರು ಹಾಗೂ ಬೆಳ್ತಂಗಡಿಯಲ್ಲಿ ಶಾಖೆಗಳನ್ನು ಹೊಂದಿದ್ದು, ಬರುವ ಆರ್ಥಿಕ ವರ್ಷದಲ್ಲಿ ಸುರತ್ಕಲ್, ಸುಳ್ಯ ಹಾಗೂ ಕಾರ್ಕಳದಲ್ಲಿ ಹೊಸ ಶಾಖೆಗಳನ್ನು ತೆರೆಯಲು ಉದ್ದೇಶಿಸಿದೆ. ಇದರಲ್ಲಿ ಸುರತ್ಕಲ್ ಶಾಖೆಯು ಉದ್ಘಾಟನೆಗೆ ಸಜ್ಜಾಗಿದ್ದು, ಅಗೋಸ್ಟ್ ತಿಂಗಳಲ್ಲಿ ಶುಭಾರಂಭಗೊಳ್ಳಲಿದೆ. ಮುಂದಿನ ದಿನಗಳಲ್ಲಿಯೂ ಸಂಘದ ಸದಸ್ಯರ, ಹಿತೈಷಿಗಳ ಮತ್ತು ಅಭಿಮಾನಿಗಳ ತುಂಬು ಹೃದಯದ ಸಹಕಾರವನ್ನು ಆಡಳಿತ ಮಂಡಳಿಯು ಬಯಸುತ್ತದೆ ಎಂದು ಸಂಘದ ಪ್ರಕಟಣೆಯು ತಿಳಿಸಿದೆ.

## ಪಡುಬಿದ್ರೆಯಲ್ಲಿ ಋಗುಪಾಕರ್ಮ

ಪಡುಬಿದ್ರೆಯ ಸ್ಥಾನಿಕ ಬ್ರಾಹ್ಮಣ ಸಮಾಜದ ವತಿಯಿಂದ ದಿನಾಂಕ 07-09-2014ರಂದು ಬೆಳಿಗ್ಗೆ 7-00 ಗಂಟೆಗೆ ಪಡುಬಿದ್ರಿಯ ಬಾಲಗಣಪತಿ-ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಸೌರ ಋಗುಪಾಕರ್ಮವು ನೆರವೇರಲಿದೆ. ಸಮಾಜ ಬಾಂಧವರು ಕ್ಲಪ್ತ ಸಮಯದಲ್ಲಿ ಬಂದು ಸಹಕರಿಸಬೇಕೆಂದು ಸಂಘದ ಪ್ರಕಟಣೆಯು ತಿಳಿಸಿದೆ.

### ಪುಣ್ಯಸ್ಮರಣೆ



**ನಂದಳಿಕೆ ಸದಾನಂದ ರಾವ್ (ದೊಂಬಿವಿಲಿ)**

ಅವರ

**ವರ್ಷಾಂತಿಕ ಶ್ರಾದ್ಧವು**

ಆಗಸ್ಟ್ 24ರಂದು ನಡೆಯಲಿರುವ ಈ ಸಂದರ್ಭದಲ್ಲಿ

**ನಮ್ಮನ್ನಗಲಿದ ನಿಮ್ಮ ಜೀವಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ,**

**ಸದಾ ನಿಮ್ಮ ನೆನಪಿನಲ್ಲಿರುವ,**

**ಪತ್ನಿ, ಮಗ, ಸೊಸೆ, ಮಗಳಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು.**

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ (ನಿ.)

ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408

### 2013-14ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು

ಮಾನ್ಯ ಸದಸ್ಯರೇ,

ನಮ್ಮ ಸಂಘದ 2013-2014ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.21-09-2014ನೇ ರವಿವಾರ ಪೂರ್ವಾಹ್ನ ಘಂಟೆ 11-00ಕ್ಕೆ ಸರಿಯಾಗಿ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದ ಸಭಾಂಗಣದಲ್ಲಿ ನಡೆಯಲಿರುವುದು. ಮಾನ್ಯ ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿದ್ದು ಸಭೆಯ ನಡವಳಿಕೆಗಳಲ್ಲಿ ಭಾಗಿಗಳಾಗಬೇಕಾಗಿ ವಿನಂತಿ.

**ಆಡಳಿತ ಮಂಡಳಿಯ ನಿರ್ಣಯದಂತೆ**

**ಪಟ್ಟಾಭಿರಾಮ ಎನ್.ಎಸ್** — ಕಾರ್ಯದರ್ಶಿ

**ಎಂ ಸದಾನಂದ ರಾವ್** — ಅಧ್ಯಕ್ಷರು

**ವಿಷಯ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು.
2. ತಾ: 22-09-2013ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ.
3. 2013-2014ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2013-2014ನೇ ಸಾಲಿನ ಪರಿಶೋಧಿತ ಲೆಕ್ಕ ಪತ್ರಗಳ ಮಂಡನೆ ಮತ್ತು ಅಂಗೀಕಾರ.
5. 2013-2014ನೇ ಸಾಲಿನ ಅಂದಾಜು ಆಯ-ವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2014-2015ನೇ ಸಾಲಿನ ಅಂದಾಜು ಆಯ-ವ್ಯಯ ಪಟ್ಟಿಯ ಅಂಗೀಕಾರ.
7. 2013-2014ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
8. 2014-2015ನೇ ಸಾಲಿಗೆ ಶಾಸನಾತ್ಮಕ ಲೆಕ್ಕ ಪರಿಶೋಧಕರ ನೇಮಕ
9. ಸಂಘದ ಮೂಲ ಉಪನಿಬಂಧನೆಗಳಿಗೆ ಸೂಚಿಸಲಾದ ತಿದ್ದುಪಡಿ ಬಗ್ಗೆ.
10. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು.

**ವಿ.ಸೂ. :** 1. ಮಹಾಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳೇನಾದರೂ ಇದ್ದಲ್ಲಿ ಮಹಾಸಭೆಯ ದಿನಾಂಕದ 7 ದಿನಗಳ ಮೊದಲು ಸಂಘದ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ತಿಳಿಸತಕ್ಕದ್ದು.

2. ಲಾಭಾಂಶ ಹಾಗೂ ಪಾಲು ಪತ್ರ ಪಡೆಯದ ಸದಸ್ಯರು ಕಛೇರಿ ಸಮಯದಲ್ಲಿ ಪಡೆಯಬೇಕಾಗಿ ವಿನಂತಿ. ಇಲ್ಲದಿದ್ದಲ್ಲಿ 5 ವರ್ಷಕ್ಕೆ ಮೇಲ್ಪಟ್ಟು ಪಡೆಯದಿರುವ ಲಾಭಾಂಶ ಹಣವನ್ನು ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.

**ಸದಸ್ಯರಿಗೆ ಮಧ್ಯಾಹ್ನ ಭೋಜನದ ವ್ಯವಸ್ಥೆ ಇರುತ್ತದೆ.**

### ನಿಧನ — ಗಿರಿಜಾ ವಾಸುದೇವರಾವ್



ಮಂಗಳೂರಿನ ಕೋಟೆಕಾರು ಶ್ರೀ ಶೃಂಗೇರಿ ಮಠದ ಶಂಕರ ಪ್ರತಿಷ್ಠಾನ ಕಾರ್ಕಳ ಶಾಖೆಯ ಸ್ಥಾಪಕ ಅಧ್ಯಕ್ಷ ದಿ| ಜೋಗಳಬೆಟ್ಟು ವಾಸುದೇವರಾಯರ ಧರ್ಮಪತ್ನಿ ಗಿರಿಜಮ್ಮ ದಿನಾಂಕ 15-7-2014ರಂದು ತಮ್ಮ ಎಂಭತ್ತನೆಯ ವಯಸ್ಸಿನಲ್ಲಿ ತಮ್ಮ ಸ್ವಗೃಹ ಸನ್ನಿಧಿಯಲ್ಲಿ ಕೈಲಾಸವಾಸಿಯಾಗಿರುತ್ತಾರೆ.

ಶ್ರೀಮತಿ ಗಿರಿಜಮ್ಮ ಗೃಹಿಣಿಯಾಗಿದ್ದು, ಬಡವರಿಗೆ ಗಿಡಮೂಲಿಕೆಗಳ ಔಷಧ ತಯಾರಿಸಿ ಕೊಡುವ ಮೂಲಕ ನಾಟಿ ವೈದ್ಯೆ ಎಂದು ಪ್ರಸಿದ್ಧರಾಗಿದ್ದರು. ಅವರು ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರನ್ನು ಮತ್ತು ಅಪಾರ ಬಂಧುಬಾಂಧವರನ್ನು ಅಗಲಿರುತ್ತಾರೆ. ಅವರ ಅಂತಿಮ ದರ್ಶನಕ್ಕೆ ನೆರೆದ ಜನಸ್ತೋಮವೇ ಅವರ ಜನಪ್ರಿಯತೆಗೆ ಸಾಕ್ಷಿಯಾಗಿತ್ತು. ಮೃತರ ಆತ್ಮಕ್ಕೆ ಸದ್ಗತಿಯನ್ನೂ ಮನೆ ಮಂದಿಗೆ ದುಃಖ ಸಹಿಸುವ ಶಕ್ತಿಯನ್ನೂ ಭಗವಂತ ನೀಡಲೆಂದು ಶ್ರೀ ಶಂಕರ ಪ್ರತಿಷ್ಠಾನ ಕಾರ್ಕಳ ಪ್ರಾರ್ಥಿಸುತ್ತದೆ.

ವರದಿ : ಶ್ರೀಮತಿ ಸಾವಿತ್ರಿ ಮನೋಹರ್, ಕಾರ್ಕಳ

### ರುಕ್ಮಿಣಿ ಅಮ್ಮ



ದಿ| ಪಾದೆಬೆಟ್ಟು ಕೃಷ್ಣರಾಯರ ಧರ್ಮ ಪತ್ನಿ ರುಕ್ಮಿಣಿ ಅಮ್ಮನವರು ದಿನಾಂಕ 28-07-2014ರಂದು ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.


## ಶ್ರೀ ಮಾತಾ ಜ್ಯೋತಿಷ್ಯಾಲಯ

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

## ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.

ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)**, ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ, ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2014ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.

– ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ – 576 102.

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)**, ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಉದಯಚಂದ್ರ ಪ್ರತಿಭಾ ಪುರಸ್ಕಾರ 2013-14

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2013-14ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2014ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್ ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**– ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)**, ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸ್ತವ್ಯದಲ್ಲಿರುವ ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್ ವಿಜೇತರಾದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2014ರ ಒಳಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು-576102, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ. **-ಕಾರ್ಯದರ್ಶಿ**

# ಚಾತುರ್ಮಾಸದಲ್ಲಿ ಗುರುಗಳ ಭೇಟಿ

**ಉಡುಪಿ ಕುಂಜಿಬೆಟ್ಟಿನಿಂದ-**

ನಮ್ಮ ಕುಲಗುರುಗಳೂ ದಕ್ಷಿಣಾಮ್ನಾಯ ಶ್ರೀಕ್ಷೇತ್ರ ಶೃಂಗೇರಿಯ ಜಗದ್ಗುರುಗಳೂ ಆದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ತಮ್ಮ ಚಾತುರ್ಮಾಸ ವ್ರತವನ್ನು ಶೃಂಗೇರಿಯಲ್ಲಿ ಕೈಗೊಂಡಿದ್ದು, ಪ್ರತಿವರ್ಷದಂತೆ ಅವರ ಭೇಟಿಗಾಗಿ ತಾ.24-08-2014ರಂದು ಶೃಂಗೇರಿಗೆ ತೆರಳುವುದೆಂದು ಉಡುಪಿಯ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ತೀರ್ಮಾನಿಸಿದೆ. ಅದರಂತೆ ಅದೇ ದಿನ ಬೆಳಿಗ್ಗೆ 7-00 ಗಂಟೆಗೆ ಉಡುಪಿಯ ಶ್ರೀಶಾರದಾ ಮಂಟಪದಿಂದ ಸಮಾಜ ಬಾಂಧವರು ಜೊತೆಯಾಗಿ ಹೊರಡುವುದೆಂದು ನಿರ್ಣಯಿಸಲಾಗಿದೆ. ಆಸಕ್ತ ಸಮಾಜಬಾಂಧವರು ಮೆನೇಜರ್, ಶಾರದಾ ಮಂಟಪ (9448108920), ಅಥವಾ ಕಾರ್ಯದರ್ಶಿ (9343560647) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**ಪಡುಬಿದ್ರಿಯಿಂದ-**

ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ವತಿಯಿಂದ ಸಂಘದ ಕಾರ್ಯಾಲಯ ನಂದಗೋಕುಲ, ಪಡುಬಿದ್ರಿ ಇಲ್ಲಿಂದ ಅದೇ ದಿನ ಬೆಳಿಗ್ಗೆ 7-00 ಗಂಟೆಗೆ ಶೃಂಗೇರಿಗೆ ಹೊರಡುವುದೆಂದು ನಿರ್ಣಯಿಸಲಾಗಿದೆ. ಆಸಕ್ತ ಸಮಾಜಬಾಂಧವರು ಶ್ರೀ ಸುಧಾಕರ್ ರಾವ್ ಬೆಳ್ಳೆ (9845193103) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)**, ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟಿನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2014-2015ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2014ರ ಒಳಗೆ ತಲಪುವಂತೆ ಕಳುಹಿಸಬೇಕು.

ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754


# ದೇವಿಕೃಪಾ ಏಜೆನ್ಸೀಸ್, ನಂದಿಕೂರು

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ| ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು



ಎಮ್. ದೇವಾನಂದ್ ಭಟ್
Cell : 9845644556
9483913344



# ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು



ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551

# ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

''ಶ್ರೀರಂಗ'', ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು




# RAJESH POWER PRESS

PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS


Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org